Volume: 4 Issue: 10 Pages: 33-43




# ಭಾರತೀಯ ಮತ್ತು ಪಾಶ್ಚಿಮಾತ್ಯ ಕಾವ್ಯ ತತ್ತ್ವವಿಚಾರದಲ್ಲಿಯ ಔಚಿತ್ಯ ತತ್ತ್ವದ ತೌಲನಿಕವಿಮರ್ಶೆ

*1 Mallappa

*1 Assistant Professor, Govt First Grade College, Keruru, Ta. Badami. G. Bagalkota, Karnataka, India.

**Article Info.**
**E-ISSN:** 2583-6528
**Impact Factor (SJIF):** 6.876
**Peer Reviewed Journal**
**Available online:**
www.alladvancejournal.com

**Received:** 06/Sep/2025
**Accepted:** 04/Oct/2025

***Corresponding Author**
**Mallappa**
Assistant Professor, Govt First Grade College, Keruru, Ta. Badami. G. Bagalkota, Karnataka, India.

**Abstract**
ಔಚಿತ್ಯ'ತತ್ತ್ವ ಪ್ರಾಚೀನ ಆಲಂಕಾರಿಕರಲ್ಲಿಯೇ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಆ ಹೆಸರು ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಮೊಟ್ಟಮೊದಲು 1 ಸಿಕ್ಕುವುದು ಈಗ ತಿಳಿದಿರುವಂತೆ ಯಶೋವರ್ಮನ ರಾಮಾಭ್ಯುದಯ ನಾಟಕದಲ್ಲಿ. ಆ ಗ್ರಂಥ ಸಿಕ್ಕಿಲ್ಲ. ಆದರೆ ಭೋಜ ಆ ನಾಟಕದ ಪ್ರಸ್ತಾವನೆಯಲ್ಲಿ ಬಂದಿರಬಹುದಾದ ಒಂದು ಪದ್ಯವನ್ನು ಉದಾಹರಿಸಿದ್ದಾನೆ.ಔಚಿತ್ಯ' ತನಗೆ ತಾನೇ ಇರುವ ಮೂಲತತ್ತ್ವವಲ್ಲ. ಇದಕ್ಕೆ ಇತರ ಮೂಲವಸ್ತುಗಳು ಬೇಕು. ಔಚಿತ್ಯ ಮುಖ್ಯವೆಂಬುದೇನೋ ಸರಿ. ಇದನ್ನು ಗಮನಿಸಿ ಕೆಲ ಲಾಕ್ಷಣಿಕರು ರಸಕ್ಕಿಂತ ಹೆಚ್ಚಾಗಿ ಇದನ್ನೇ ಕಾವ್ಯದ ತಿರುಳು ಎಂದು ಹೇಳುತ್ತಿದ್ದಂತೆ ತೋರುತ್ತದೆ. ಅದನ್ನು ಗಮನಿಸಿದ ಅಭಿನವಗುಪ್ತ ಎರಡು ಕಡೆಯಲ್ಲಿ ಈ ಅಭಿಪ್ರಾಯವನ್ನು ವಿಮರ್ಶಿಸಿದ್ದಾನೆ ಔಚಿತ್ಯ ಎನ್ನುವುದನ್ನು ಇತರ ಪರಿಕರಗಳಿಂದ ಹೊರತಾಗಿ ತನಗೆ ತಾನೇ ಎಂಬಂತೆ ಸ್ವತಂತ್ರವಾಗಿ ಉಪಯೋಗಿಸುವಂತಿಲ್ಲ. ಯಾವುದರಲ್ಲಿ ಔಚಿತ್ಯ ಬೇಕು ಎಂಬುದನ್ನು, ಯಾವುದಕ್ಕಾಗಿ ಔಚಿತ್ಯವಿರಬೇಕು ಎಂಬುದನ್ನು, ಮೊದಲು ಗ್ರಹಿಸಬೇಕು.ತಿಲಕದಂತಿರುವ ಒಂದೇ ಉಚಿತವಾದ ಪದವನ್ನೊಳಗೊಂಡ ಸೂಕ್ತಿಯು ಕೂಡ ಕಸ್ತೂರಿಯ ತಿಲಕವನ್ನಿಟ್ಟುಕೊಂಡ ಚಂದ್ರಾನನೆಯಂತೆಯೂ, ಶ್ರೀಗಂಧದ ತಿಲಕವನ್ನಿಟ್ಟು, ಕೊಂಡ ಶ್ಯಾಮಲ ಯುವತಿಯಂತೆಯೂ ಶೋಭಿಸುತ್ತದೆ”

**Keywords:** ರ.ಔ:-ರಸೌಚಿತ್ಯ,ಕಾ.ದೋ:-ಕಾವ್ಯದೋಷ,ರ.ಧ್ವ:-ರಸಧ್ವನಿ'ಹೊ.ವೃ:-ಹೊರವೃತ್ತ ಭಾ.ಅ:-ಭಾವಿಕಾಲಂಕಾರ

## Introduction

**ಭರತ:-ಔಚಿತ್ಯ'** ಎನ್ನುವ ಮಾತು ಇವನಲ್ಲಿಲ್ಲ. ಅದರ ಪ್ರತಿಪಾದನೆ ಸ್ಪಷ್ಟವಾಗಿದೆ. ಕಾವ್ಯದಲ್ಲಿ ಗುಣ ಅಥವಾ ದೋಷಗಳು ಅವುಗಳ ಸನ್ನಿವೇಶಗಳನ್ನು ಅವಲಂಬಿಸಿಯೇ ನಿರ್ಧಾರಿತವಾಗುತ್ತವೆ.

ಸನ್ನಿವೇಶಕ್ಕೆ ಅನುಗುಣವಾಗಿಲ್ಲದಿದ್ದರೆ ಅವು ರಸದ ಉತ್ಕರ್ಷಕ್ಕೆ ಸಹಾಯಕವಾಗುವುದಿಲ್ಲ; ಅದು ದೋಷವಾಗುತ್ತದೆ ಎನ್ನುವ ಅಂಶವನ್ನು ಹೇಳುತ್ತಾ ಭರತ ಹೀಗೆ ಹೇಳುತ್ತಾನೆ:

“ಆದೇಶ ಜೋ ಹೀ ವೇಷಸ್ತು ನ ಶೋಭಾಂ ಜನಯಿಷ್ಯತಿ | ಮೇಖಲೋರಸಿ ಬಂಧೇ ಚ ಹಾಸ್ಯಾಯೈವೋಪಜಾಯತೇ ||”(೨೩-೬೯)

“ಮೇಖಲೆಯನ್ನು ಎದೆಯ ಮೇಲೆ ಧರಿಸಿದರೆ, ಅದು ಹಾಸ್ಯಾಸ್ಪದವಾಗುತ್ತದೆ”. ತನ್ನ ಇನಿಯನಿಂದ ಅಗಲಿ, ವಿರಹದುಃಖದಿಂದ ಪರಿತಪಿಸುತ್ತಿರುವವಳನ್ನು ಸರ್ವಾಲಂಕಾರ ಭೂಷಿತಳನ್ನಾಗಿ ವರ್ಣಿಸುವುದು ಉಚಿತವಲ್ಲ. ಒಡವೆಗಳನ್ನು ಆಯಾ ಸ್ಥಳಗಳಲ್ಲಿ ಹಾಕಿಕೊಳ್ಳುವಂತೆ, ವರ್ಣನೆಗಳನ್ನು ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ಅನುಗುಣವಾದಷ್ಟನ್ನು ಮಾತ್ರ ವರ್ಣಿಸಬೇಕೆಂಬುದನ್ನು ಮೇಲಿನ ಶ್ಲೋಕದಲ್ಲಿ ಭರತ ಸೂಚಿಸಿದ್ದಾನೆ. ಇದೇ ಔಚಿತ್ಯದ ಮೂಲಸೂತ್ರ. ಔಚಿತ್ಯವನ್ನುವುದು ಕಾವ್ಯದ ವಿವಿಧ ಅಂಗಗಳಲ್ಲಿ ಕಂಡು ಬರುವ ಸಾಮರಸ್ಯ. ಸನ್ನಿವೇಶಕ್ಕನುಗುಣವಾದ ಸಮಂಜಸತೆ, ಮತ್ತು ಪ್ರಮಾಣಬದ್ಧತೆ ಇದು ಕಾವ್ಯಕ್ಕೆ ಅನಿವಾರ್ಯವಾದ ಅಂಶವೆಂಬ ಮಾತನ್ನು ಭರತ ಸ್ಪಷ್ಟವಾಗಿ ಆದರೆ ಸೂಚ್ಯವಾಗಿ ಹೇಳಿದ್ದಾನೆ.

**ರುದ್ರಟ:-** 'ಯಮಕ' ಮೊದಲಾದ ಶಬ್ದಾಲಂಕಾರಗಳನ್ನು ವಿವರಿಸುತ್ತಾ ಇವುಗಳ ಪ್ರಯೋಗದಲ್ಲಿ 'ಔಚಿತ್ಯ' ಇರಬೇಕೆನ್ನುತ್ತಾನೆ ಈತ ಅನುಪ್ರಾಸಗಳನ್ನು ಮುಖ್ಯ ವಿಷಯಕ್ಕೆ ಸಂಬಂಧಿಸಿ ಅದಕ್ಕೆ ಸಹಾಯಕವಾಗುವಂತೆಮಾತ್ರ ಬಳಸಬೇಕು. ಇದು “ಅಲಂಕಾರೌಚಿತ್ಯ”, ಹಾಗೇ ಕಾವ್ಯದೋಷಗಳನ್ನು ಹೇಳುವಾಗ, 'ಆಗ್ರಾಮ್ಯ' ಮೊದಲಾದ ದೋಷಗಳು ಔಚಿತ್ಯವರಿತು ಬಂದರೆ ಗುಣಗಳೇ

ಆಗುತ್ತವೆನ್ನುತ್ತಾನೆ. ಕೆಲವು ಶಬ್ದ ಪ್ರಯೋಗಗಳು ಕಾವ್ಯದಲ್ಲಿ ಸಾಮಾನ್ಯವಾಗಿ ಅನುಚಿತವಾಗಿಸುತ್ತದೆ ಆದರೆ ಔಚಿತ್ಯಾನುಗುಣವಾಗಿ ಬಂದಾಗ ಅವೇ ಸೂಕ್ತವಾಗಿ ಪರಿಣಮಿಸುತ್ತವೆ, "ಗ್ರಾಮ್ಯತ್ವಮನೌಚಿತ್ಯಂ ವ್ಯವಹಾರಾಕಾರವೇಷವಚನಾನಾಮ್ 1 ದೇಶ ಕುಲ ಜಾತಿ ವಿದ್ಯಾವಿತ್ತ್ಯವಯಸ್ಥಾನ ಪಾತ್ರೇಷು |"

ವ್ಯವಹಾರ, ಆಕಾರ, ವೇಷ, ವಚನ, ದೇಶಕುಲಾದಿಗಳಲ್ಲಿ ಅನೌಚಿತ್ಯ ಇರಬಾರದೆನ್ನುತ್ತಾನೆ. ಔಚಿತ್ಯವರಿತು ಬಂದಾಗ ಈ ದೋಷಗಳೆಲ್ಲಾ ಗುಣಗಳಾಗುತ್ತವೆಂಬುದನ್ನು ಗುರುತಿಸಿದ್ದಾನೆ.

**ಭಾಮಹ:-** ಕಾವ್ಯದೋಷಗಳನ್ನು ಹೇಳುವಾಗ ಅವುಗಳ ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತಾನೆ: ಈ ದೋಷಗಳೂ ಸಹ ಕೆಲವು ವೇಳೆ ಸನ್ನಿವೇಶಬಲದಿಂದ ಗುಣಗಳೇ ಆಗಬಲ್ಲುವೆಂದು ಹೇಳುವಾಗ ಈ ಮಾತು ಬರುತ್ತದೆ:/ಸನ್ನಿವೇಶವಿಶೇಷಾತ್ತು ದುರುಕ್ತಮಪಿ ಶೋಭತೇ | ನೀಲಂ ಪಲಾಶಮಾಬದ್ಧ ಮಂತರಾಲೇ ಸ್ರಜಾಮಿವ | (ಕಾವ್ಯಾಲಂಕಾರ ೧. ೫೪)

"ಸನ್ನಿವೇಶವಿಶೇಷದಿಂದ ದುರುಕ್ತಿ ಅಂದರೆ ಕೆಟ್ಟ ಮಾತೂ ಶೋಭಿಸುತ್ತದೆ; ದೋಷವೂ ಗುಣವಾಗುತ್ತದೆ. ಹೇಗೆಂದರೆ ಹೂವಿನ ಹಾರದ ಮಧ್ಯೆ ಇರುವ ಸೊಪ್ಪಿಗೂ ಹೂವುಗಳಿಂದ ಬೆಲೆ ಬರುವಂತೆ." ಹಾಗೇ ಮುಂದುವರಿದು ಇನ್ನೊಂದು ಸಾದೃಶ್ಯವನ್ನು ಕೊಡುತ್ತಾನೆ: ಕಣ್ಣಿನ ಸೌಂದರ್ಯವನ್ನು ಕಾಡಿಗೆ ಹೆಚ್ಚಿಸುವಂತೆ ಎಂದು ಹೇಳುತ್ತಾನೆ. ಇವುಗಳ ಹಿಂದಿರುವುದು ಔಚಿತ್ಯವೇ. ಪುನರುಕ್ತಿ ತನಗೆ ತಾನೇ ದೋಷವಾಗಬಹುದು. ಆದರೆ ಹರ್ಷ, ಭಯ ಮೊದಲಾದುವುಗಳ ಅತಿಶಯತೆಯನ್ನು ಹೇಳುವಾಗ ಗುಣವೇ ಆಗುತ್ತದೆ. ಮುಂದೆ ಈತ ಕಾವ್ಯದಲ್ಲಿ 'ಲೋಕವಿರೋಧ' ದೋಷಗಳನ್ನು ಪ್ರಸ್ತಾಪಿಸುವಾಗಲೂ ಈ ತತ್ತ್ವ ಕಂಡು ಬರುತ್ತದೆ. 'ಪ್ರಕೃತೌಚಿತ್ಯ'ವನ್ನುಮೀರುವುದೇ 'ಲೋಕವಿರೋಧಕ್ಕೆ' ಕಾರಣವಾಗುತ್ತದೆನ್ನುತ್ತಾನೆ.

**ದಂಡಿ**:-ಕಾವ್ಯದೋಷಗಳ ನಿರೂಪಣೆಯ ಸಂದರ್ಭದಲ್ಲಿಯೇ ಔಚಿತ್ಯದ ಪ್ರತಿಪಾದನೆ ಕಂಡುಬರುತ್ತದೆ. "ದೋಷಗಳೆಲ್ಲವೂ ಔಚಿತ್ಯದಿಂದ ಗುಣಗಳಾಗಿ ಪರಿಣಮಿಸಬಲ್ಲುವೆಂಬುದನ್ನು ಆತ ಕಂಡುಕೊಂಡಿದ್ದಾನೆ. 'ಅಪಾರ್ಥ' ಒಂದು ದೋಷ; ಆದರೆ ಹುಚ್ಚನ ಪಾತ್ರವನ್ನು ಚಿತ್ರಿಸುವಾಗ, ಉದಾಹರಣೆ ಮೃಚ್ಛಕಟಿಕ ನಾಟಕದ 'ಶಕಾರ' ಪಾತ್ರದಲ್ಲಿ, ಅದು ಗುಣವೇ ಆಗುತ್ತದೆ. ಹಾಗೆಯೇ 'ವಿರುದ್ಧಾರ್ಥ' ಇತ್ಯಾದಿ ದೋಷಗಳನ್ನು ಹೇಳಬಹುದು. ಆದ್ದರಿಂದ ಕಾವ್ಯದಲ್ಲಿ ದೋಷ ಎನ್ನುವುದು ತನಗೆ ತಾನೇ ಇಲ್ಲ, ಬಳಸುವ ರೀತಿಯನ್ನು ಸನ್ನಿವೇಶವನ್ನು ಅದು ಅವಲಂಬಿಸಿದೆ.

"ವಿರೋಧಃ ಸಕಲೋಪೇಷ ಕದಾಚಿತ್ಕವಿಕೌಶಲಾತ್| ಉತ್ಕ್ರಮ್ಯದೋಷಗಣನಾಂ ಗುಮವೀಥೀಂ ವಿಗಾಹ್ಯತೇ ||" (IV ೫-೭)

ಕಾವ್ಯದಲ್ಲಿ ಗುಣದೋಷಗಳು ಕವಿಕೌಶಲ್ಯದಿಂದ ನಿರ್ಧಾರಿತವಾಗುತ್ತವೆ. ದೋಷಗಳು ನಿತ್ಯವಲ್ಲ, ಅನಿತ್ಯ- ಎಂದು ಆಲಂಕಾರಿಕರು ಹೇಳಿದುದರ ಕಾರಣ ಇದೇ.

**ಔಚಿತ್ಯ ಪದ ಪ್ರಯೋಗ:-**ಔಚಿತ್ಯ'ತತ್ವ ಪ್ರಾಚೀನ ಆಲಂಕಾರಿಕರಲ್ಲಿಯೇ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಆ **ಹೆ**ಸರು ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಮೊಟ್ಟಮೊದಲು 1 ಸಿಕ್ಕುವುದು ಈಗ ತಿಳಿದಿರುವಂತೆ ಯಶೋವರ್ಮನ ರಾಮಾಭ್ಯುದಯ ನಾಟಕದಲ್ಲಿ. ಆ ಗ್ರಂಥ ಸಿಕ್ಕಿಲ್ಲ. ಆದರೆ ಭೋಜ ಆ ನಾಟಕದ ಪ್ರಸ್ತಾವನೆಯಲ್ಲಿ ಬಂದಿರಬಹುದಾದ ಒಂದು ಪದ್ಯವನ್ನು ಉದಾಹರಿಸಿದ್ದಾನೆ: (೮ನೇ ಶತಮಾನದ ಪೂರ್ವಾರ್ಧ)'

"ಔಚಿತ್ಯಂ ವಚಸಾಂ ಪ್ರಕೃತ್ಯನುಗತಂ ಪಾತ್ರೋಚಿತಾ | ಪುಷ್ಟಿ: ಸ್ವಾವಸರೇ ರಸಸ್ಯ ಚ, ಕಥಾಮಾರ್ಗೆ ನ ಜಾತಿಕ್ರಮಃ ||"

ಎಂಬಲ್ಲಿ ಯಶೋವರ್ಮ ಈ ಪದವನ್ನು ಬಳಸಿದ್ದಾನೆ.

ಮಾತು, ಪಾತ್ರ, ರಸ ಮೊದಲಾದ ಎಲ್ಲ ಅಂಗಗಳಲ್ಲಿಯೂ ಔಚಿತ್ಯ'ವಿರಬೇಕೆನ್ನುತ್ತಾನೆ. ಇವನು ಹೇಳಿದ 'ಪಾತ್ರೌಚಿತ್ಯಂ' ಮತ್ತು 'ಪುಷ್ಟಿಃ ಸ್ವಾವಸರೇ ರಸಸ್ಯ' ಈ ಮಾತುಗಳನ್ನು ರುದ್ರಟ, ಆನಂದವರ್ಧನರು ಬೆಳೆಸಿದ್ದಾರೆ.

ಆದರೆ 'ಔಚಿತ್ಯ' ಎನ್ನುವ ಈ ಮಾತು ಭರ್ತೃಹರಿಯ 'ವಾಕ್ಯಪದೀಯ'ದಲ್ಲಿ (ಕ್ರಿ.ಶ. ೭ನೇ ಶ.) ಮೊದಲು ಗೋಚರವಾಗುತ್ತದೆ. ಒಂದು ಪದ್ಯಕ್ಕೆ ಹಲವಾರು ಅರ್ಥಗಳಿರುವಾಗ ಉದ್ದೇಶಿತ ಸಂದರ್ಭದಲ್ಲಿ ಯಾವ ಅರ್ಥವನ್ನು ಇಟ್ಟುಕೊಳ್ಳಬೇಕೆಂಬುದನ್ನು ಸೂಚಿಸುವುದಕ್ಕೆ 'ಔಚಿತ್ಯ' ಎಂಬ ಮಾತನ್ನು ಅಲ್ಲಿ ಬಳಸಲಾಗಿದೆ. ಅನಂತರ ಈ ಮಾತು ವ್ಯಾಕರಣದಿಂದ ಕಾವ್ಯಮೀಮಾಂಸೆಯ ವಲಯದೊಳಕ್ಕೆ ಬಂದಂತೆ ತೋರುತ್ತದೆ.

**ಲೊಲ್ಲಟ:-ರಸೌಚಿತ್ಯವನ್ನು ಹೇಳಿದ್ದಾನೆ.**
**ಔಚಿತ್ಯದ ಬೆಳವಣಿಗೆಯ ಮೂರು ಘಟ್ಟಗಳು.**

1. ಯಶೋವರ್ಮನವರೆಗಿನ ಬೆಳವಣಿಗೆ
2. ಯಶೋವರ್ಮ 'ಔಚಿತ್ಯ' ಎನ್ನುವ ಮಾತನ್ನು 'ರಾಮಾಭ್ಯುದಯ'ದಲ್ಲಿ ಬಳಸಿದುದು.
3. ರುದ್ರಟ ಅದನ್ನು ತನ್ನ ಅಲಂಕಾರಗ್ರಂಥದಲ್ಲಿ ಮೊಟ್ಟಮೊದಲು ಸೇರಿಸಿ ವಿವೇಚಿಸಿದುದು ಅನಂತರ ಆನಂದವರ್ಧನ ಅದನ್ನು ವಿಸ್ತಾರವಾಗಿ ಪ್ರತಿಪಾದಿಸಿದುದು, ಮತ್ತು ಅದರಿಂದ ಕ್ಷೇಮೇಂದ್ರನ ಸಿದ್ಧಾಂತಕ್ಕೆ ದಾರಿಮಾಡಿಕೊಟ್ಟುದು,

**ರುದ್ರಟ:-** 'ಯಮಕ' ಮೊದಲಾದ ಶಬ್ದಾಲಂಕಾರಗಳನ್ನು ವಿವರಿಸುತ್ತಾ ಇವುಗಳ ಪ್ರಯೋಗದಲ್ಲಿ 'ಔಚಿತ್ಯ' ಇರಬೇಕೆನ್ನುತ್ತಾನೆ ಈತ ಅನುಪ್ರಾಸಗಳನ್ನು ಮುಖ್ಯ ವಿಷಯಕ್ಕೆ ಸಂಬಂಧಿಸಿ ಅದಕ್ಕೆ ಸಹಾಯಕವಾಗುವಂತೆಮಾತ್ರ ಬಳಸಬೇಕು. ಇದು "ಅಲಂಕಾರೌಚಿತ್ಯ", ಹಾಗೇ ಕಾವ್ಯದೋಷಗಳನ್ನು ಹೇಳುವಾಗ, 'ಆಗ್ರಾಮ್ಯ' ಮೊದಲಾದ ದೋಷಗಳು ಔಚಿತ್ಯವರಿತು ಬಂದರೆ ಗುಣಗಳೇ ಆಗುತ್ತವೆನ್ನುತ್ತಾನೆ. ಕೆಲವು ಶಬ್ದ ಪ್ರಯೋಗಗಳು ಕಾವ್ಯದಲ್ಲಿ ಸಾಮಾನ್ಯವಾಗಿ ಅನುಚಿತವಾಗಿಸುತ್ತದೆ ಆದರೆ ಔಚಿತ್ಯಾನುಗುಣವಾಗಿ ಬಂದಾಗ ಅವೇ ಸೂಕ್ತವಾಗಿ ಪರಿಣಮಿಸುತ್ತವೆ, "ಗ್ರಾಮ್ಯತ್ವಮನೌಚಿತ್ಯಂ ವ್ಯವಹಾರಾಕಾರವೇಷವಚನಾನಾಮ್ 1 ದೇಶ ಕುಲ ಜಾತಿ ವಿದ್ಯಾವಿತ್ತ್ಯವಯಸ್ಥಾನ ಪಾತ್ರೇಷು |"

ವ್ಯವಹಾರ, ಆಕಾರ, ವೇಷ, ವಚನ, ದೇಶಕುಲಾದಿಗಳಲ್ಲಿ ಅನೌಚಿತ್ಯ ಇರಬಾರದೆನ್ನುತ್ತಾನೆ. ಔಚಿತ್ಯವರಿತು ಬಂದಾಗ ಈ ದೋಷಗಳೆಲ್ಲಾ ಗುಣಗಳಾಗುತ್ತವೆಂಬುದನ್ನು ಗುರುತಿಸಿದ್ದಾನೆ.

**ಆನಂದವರ್ಧನ ಧ್ವನ್ಯಾಲೋಕ'ದಲ್ಲಿ** ಔಚಿತ್ಯದ ಕಲ್ಪನೆ ಹೆಚ್ಚಾಗಿ ಬೆಳೆಯಿತು. ಆನಂದವರ್ಧನನದು ಧ್ವನಿಸಿದ್ಧಾಂತ. ಧ್ವನಿಯಿಂದ ರಸಪ್ರತೀತಿಯುಂಟಾಗುತ್ತದೆ, ಅದೇ ಕಾವ್ಯದ ಆತ್ಮ ಎಂದವನು ಆತ. ಆದರೆ ಈ ರಸಪ್ರತೀತಿಗೆ ಅನಿವಾರ್ಯವಾದ ಅಂಶವೆಂದರೆ ಔಚಿತ್ಯ' ಎಂಬುದನ್ನು ಆತ ಬಹಳ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾನೆ.

ವಸ್ತು, ಅಲಂಕಾರ, ಗುಣ ಇವು ರಸಕ್ಕೆ ಹೊರಗಿನ ಆವರಣಗಳು; ಇವುಗಳಲ್ಲಿ ಔಚಿತ್ಯ'ವಿದ್ದಾಗ ಮಾತ್ರ ರಸನಿಷ್ಪನ್ನವಾಗುತ್ತದೆ ಎಂದು ಹೇಳಿ ವಸ್ತು ಮತ್ತು ಅಲಂಕಾರಗಳಲ್ಲಿ ಔಚಿತ್ಯದ ಅನಿವಾರ್ಯತೆಯನ್ನು ಸ್ಥಾಪಿಸಿದವನು ಆನಂದವರ್ಧನ. ಅಲಂಕಾರ ತನಗೆ ತಾನೇ ಪ್ರಧಾನವಲ್ಲ; ರಸಕ್ಕೆ ಸಹಾಯಕವಾಗುವಂತೆ ಅವು ಬರಬೇಕು. ಆಗ ಮಾತ್ರ ಅವುಗಳಿಗೆ 'ಅಲಂಕಾರ' ಎಂಬ ಹೆಸರು ಸಾರ್ಥಕವಾಗುತ್ತದೆ.

“ರಸಭಾವಾದಿ ತಾತ್ಪರಮಾಶ್ರಿತ್ಯ ವಿನಿವೇಶನಮ್।
ಅಲಂಕೃತೀನಾಂ ಸರ್ವಸಾಮಲಂಕಾರತ್ವಸಾಧನಮ್//
ಎಂದು ಈ ಅಲಂಕಾರಗಳು ರಸಾಶ್ರಿತವಾಗಿರಬೇಕೆಂಬುದನ್ನು ಒತ್ತಿಹೇಳಿದ್ದಾನೆ.
ಶಬ್ದಲಂಕಾರ&ಅರ್ಥಾಲಂಕರಗಳು ಔಚಿತ್ಯಪೂರ್ಣವಾಗಿರಬೇಕೆನ್ನುತ್ತಾನೆ.
“ರಸಾಕ್ಷಿಪ್ತತಯಾ ಯಸ್ಯ ಬಂಧಃ ಶಕ್ಯಕ್ರಿಯೋ ಭವೇತ್।
ಅಪೃಥಗ್ಯ ಯತ್ನನಿರ್ವರ್ತ್ಯಹಃ: ಸೋಲಂಕಾರೋ ಧ್ವನೌಮತಃ || (೨-೧೭)
ಹೀಗೆ ಅಲಂಕಾರಗಳು ರಸಾಕ್ಷಿಪ್ತವಾಗಿ ಸಹಜವಾಗಿಯೂ ಮೂಡಿಬಂದಾಗ ಮಾತ್ರ ಔಚಿತ್ಯವನ್ನು ಪಡೆಯುತ್ತವೆ. ಕ್ಷೇಮೇಂದ್ರನ ಅಲಂಕಾರೌಚಿತ್ಯಕ್ಕೆ ಇದೇ ತಳಹದಿ, ಅಲಂಕಾರೌಚಿತ್ಯದ ನಂತರ ಗುಣೌಚಿತ್ಯವನ್ನು ಹೇಳುತ್ತಾನೆ ಆನಂದವರ್ಧನ, ಮಾಧುರ್ಯವೋ ಕಾಂತಿಯೋ ಓಜಸ್ಸೋ ರಸಕ್ಕೆ ಅನುಗುಣವಾಗಿ ಬರಬೇಕು. ಶೃಂಗಾರರಸಕ್ಕೆ ಸಹಜಗುಣ ಮಾಧುರ್ಯ
ಹಾಗೆಯೇ ವೀರಕ್ಕೆ ಓಜಸ್ಸು, ಇತ್ಯಾದಿ ರಸಕ್ಕೆ ಅನುಗುಣವಾಗಿ ಗುಣಗಳೂ ಮತ್ತು ಅದಕ್ಕೆ ಸಂವಾದಿಯಾಗಿ ಸಂಘಟನೆ(ರೀತಿ)ಯೂ ರೂಪುಗೊಳ್ಳುತ್ತವೆ. ಸಂಘಟನೆಯಲ್ಲಿ ಬರುವ ಪದಪ್ರಯೋಗದಲ್ಲಿಯೂ ಔಚಿತ್ಯವಿರಬೇಕು. ರಸಕ್ಕನುಗುಣವಾಗಿ ಪರಿಪವರ್ಣ, ಸರಳ ವರ್ಣಾದಿಗಳು ಬರುತ್ತವೆ. ಈ ವರ್ಣೌಚಿತ್ಯದಿಂದಲೇ 'ವರ್ಣಧ್ವನಿ' ಸಾಧ್ಯವಾಗುತ್ತದೆ. ಸಂಘಟನೆಯಲ್ಲಿ ಬರುವ ಈ ಔಚಿತ್ಯವನ್ನು 'ಸಂಘಟನೌಚಿತ್ಯ' ಎಂದು ಕರೆದಿದ್ದಾನೆ.
ಕಾವ್ಯದ ವಿವಿಧ ಭಾಗಗಳ ಬೆಳವಣಿಗೆಯಲ್ಲಿಯೂ ಔಚಿತ್ಯವಿರಬೇಕು. ಇದು ಪ್ರಕರಣೌಚಿತ್ಯ. ಸನ್ನಿವೇಶ, ಘಟನೆ, ಪಾತ್ರ, ವರ್ಣನೆ ಈ ಎಲ್ಲ ವಿಭಾಗಗಳಲ್ಲಿ ಔಚಿತ್ಯವಿರಬೇಕು.ಇವುಗಳಿಂದ ಪ್ರಬಂಧ ಧ್ವನಿ(ಭಾವಿಕಾಲಂಕಾರ) ಸಿದ್ಧಿಸುತ್ತದೆ. ಹರಿಹರನಂತಹ ಕವಿಯೂ ಕೂಡ ನಾರದನನ್ನು ವೇಶ್ಯಾವಾಟಿಕೆಯಲ್ಲಿ ಸುತ್ತಿಸುತ್ತಾನೆ ಗಿರಿಜಾಕಲ್ಯಾಣದಲ್ಲಿ. ಅನೌಚಿತ್ಯಕ್ಕೆ ಇಂತಹ ಎಷ್ಟೋ ಉದಾಹರಣೆಗಳು ಕನ್ನಡಕಾವ್ಯಗಳಲ್ಲಿ ದೊರೆಯುತ್ತವೆ. ಕಾವ್ಯದಲ್ಲಿ ಮುಖ್ಯರಸದ ಬೆಳವಣಿಗೆಯನ್ನು ಕವಿ ಗಮನದಲ್ಲಿಟ್ಟುಕೊಂಡು ಅದಕ್ಕನುಗುಣವಾಗಿ ಘಟನೆ ಗಳನ್ನೂ ವರ್ಣನೆಗಳನ್ನೂ ತರಬೇಕಾಗುತ್ತದೆ “ವಿಷಯೌಚಿತ್ಯ' 'ರಸೌಚಿತ್ಯ'ಗಳನ್ನು ಈ ದೃಷ್ಟಿಯಿಂದ ಆನಂದವರ್ಧನ ಎತ್ತಿಹೇಳುತ್ತಾನೆ. ಹೀಗೆ ವರ್ಣ ಪದಪ್ರಯೋಗಗಳಿಂದ ಹಿಡಿದು ವಸ್ತು ರೀತಿ ಅಲಂಕಾರ ರಸಾದಿಗಳವರೆಗೆ ಎಲ್ಲವುಗಳಲ್ಲಿ ಔಚಿತ್ಯವನ್ನು ಸಾಧಿಸುವುದೇ ಶ್ರೇಷ್ಠಕಾವ್ಯರಚನೆಯ ರಹಸ್ಯ ಎಂಬುದನ್ನು ವಿವರಿಸುತ್ತಾನೆ. ಈ ಸಂದರ್ಭದಲ್ಲಿ ಆತ ಹೇಳುವ ಬಹಳ ಪ್ರಮುಖವಾದ ಒಂದು ಮಾತನ್ನು ಇಲ್ಲಿ ನೋಡಬಹುದು
:”ಅನೌಚಿತ್ಯಾಧೃತೆ ನಾನ್ಯತ್ ರಸಭಂಗಸ್ಯ ಕಾರಣಮ್ |
ಪ್ರಸಿದ್ಧೌಚಿತ್ಯ ಬಂಧಸ್ತು ರಸಸ್ಯೋಪನಿಷತ್ಪರಾ |”

ಅನೌಚಿತ್ಯವೇ ರಸಭಂಗಕ್ಕೆ ಕಾರಣ: ಬೇರೇನೂ ಅಲ್ಲ. ಪ್ರಸಿದ್ಧವಾದ 'ಔಚಿತ್ಯ'ದ ಬಂಧವೇ ರಸದ ರಹಸ್ಯ ಎನ್ನುವ ಈ ಹೇಳಿಕೆ ಔಚಿತ್ಯದ ಮಹತ್ವವನ್ನೂ ಸರ್ವವ್ಯಾಪಕತೆಯನ್ನೂ ಸ್ಪಷ್ಟಪಡಿಸುತ್ತದೆ,
/ಆನಂದವರ್ಧನ ಇಷ್ಟು ದೀರ್ಘವಾಗಿ ಔಚಿತ್ಯವನ್ನು ಪ್ರತಿಪಾದಿಸಿದುದಕ್ಕೆ ಕಾರಣ,

ವಾಚ್ಯಾನಾಂ ವಾಚಕಾನಾಂ ಚ ಯದೌಚಿನ ಯೋಜನಮ್ |
ರಸಾದಿ ವಿಷಯೇತತ್ ಕರ್ಮ ಮುಖ್ಯಂ ಮಹಾಕವೇಃ l (2-23)

ಎಂಬ ಮಾತಿನಲ್ಲಿ ಔಚಿತ್ಯವೇ ಮಹಾಕವಿ ಕರ್ಮರಹಸ್ಯವೆಂದು ಹೇಳಿದ್ದಾನೆ. ಹಿಂದೆ ಹೇಳಿದ **'ರಸಸ್ಯೋಪನಿಷತ್ಪರಾ'** ಎಂಬುದರಿಂದ ಹಿಡಿದು ಈ ಮಾತಿನವರೆಗೂ ಆನಂದವರ್ಧನನ ಔಚಿತ್ಯದ ವಿವೇಚನೆ ಬೆಳೆದು ಪೂರ್ಣಗೊಂಡಿದೆ.

**ಅಭಿನವಗುಪ್ತನ ವ್ಯಾಖ್ಯಾನ:- ರಸ, ಧ್ವನಿಗಳಿಂದ ಔಚಿತ್ಯ'** ಸಹಜವಾಗಿಯೇ ಹೊರಹೊಮ್ಮುತ್ತದೆನ್ನುವುದನ್ನೂ ಮತ್ತು ಈ ಮೂರೂ ಬೇರ್ಪಡಿಸಲಾಗದ ತ್ರಿತ್ವಮುಖಿ, ತತ್ವಗಳೆಂಬುದನ್ನೂ ಈತ ಸ್ಪಷ್ಟಪಡಿಸಿದ: 'ಉಚಿತ ಶಬ್ದೇನ ರಸವಿಷಯಮೌಚಿತ್ಯ: ಭವತೀತಿ ದರ್ಶಯನ್ ರಸಧ್ವನೇಃ ಜೀವಿತತ್ವಂ ಸೂಚಯತಿ' ಎನ್ನುವ ಈತನ ಮಾತು ಈ ನಿಲವನ್ನು ನಿರೂಪಿಸುತ್ತಿದೆ. ಅಲಂಕಾರೌಚಿತ್ಯದ ಬಗೆಗೆ ಹೇಳುತ್ತಾ 'ಅಲಂಕಾರ್ಯ' ಇದ್ದರೆ ಮಾತ್ರ ಅದು 'ಅಲಂಕಾರ' ಎನ್ನುವ ಹೆಸರಿಗೆ ಯೋಗ್ಯವಾಗುತ್ತದೆನ್ನುತ್ತಾನೆ. ಇಲ್ಲವಾದರೆ ಅಲಂಕಾರಗಳೆಲ್ಲಾ ಹೆಣಕ್ಕೆ ಮಾಡಿದ ಶೃಂಗಾರದಂತೆ. ಜೀವಂತ ದೇಹಕ್ಕೆ ಮಾಡುವ ಶೃಂಗಾರದಲ್ಲಿಯೂ ಔಚಿತ್ಯ ಬೇಕು. ವಿರಾಗಿಣಿಗೆ ಅಲಂಕಾರಗಳನ್ನು ತೊಡಿಸಿದರೆ ಅದು ಅನೌಚಿತ್ಯವಾಗುತ್ತದೆ. ಹಾಗೆಯೇ ಅನಗತ್ಯವಾದ ಕಡೆಗಳಲ್ಲಿ ಅಲಂಕಾರಗಳು ಬಂದರೆ ಅದು ಅಲಂಕಾರೌಚಿತ್ಯವನ್ನು ಮೀರಿದಂತಾಗುತ್ತದೆ. ವಿಭಾವಾನುಭಾವಾದಿಗಳಲ್ಲಿ ಔಚಿತ್ಯ ವಿದ್ದರೆ ರಸಪ್ರತೀತಿಗೆ ಕಾರಣವಾಗುತ್ತದೆಂಬುದನ್ನು ವಿವರಿಸಿ ಅದನ್ನು ರಸೌಚಿತ್ಯವೆಂದು ಕರೆದಿದ್ದಾನೆ.

'ಔಚಿತ್ಯ' ತನಗೆ ತಾನೇ ಇರುವ ಮೂಲತತ್ವವಲ್ಲ. ಇದಕ್ಕೆ ಇತರ ಮೂಲವಸ್ತುಗಳು ಬೇಕು. ಔಚಿತ್ಯ ಮುಖ್ಯವೆಂಬುದೇನೋ ಸರಿ. ಇದನ್ನು ಗಮನಿಸಿ ಕೆಲ ಲಾಕ್ಷಣಿಕರು ರಸಕ್ಕಿಂತ ಹೆಚ್ಚಾಗಿ ಇದನ್ನೇ ಕಾವ್ಯದ ತಿರುಳು ಎಂದು ಹೇಳುತ್ತಿದ್ದಂತೆ ತೋರುತ್ತದೆ. ಅದನ್ನು ಗಮನಿಸಿದ ಅಭಿನವಗುಪ್ತ ಎರಡು ಕಡೆಯಲ್ಲಿ ಈ ಅಭಿಪ್ರಾಯವನ್ನು ವಿಮರ್ಶಿಸಿದ್ದಾನೆ ಔಚಿತ್ಯ ಎನ್ನುವುದನ್ನು ಇತರ ಪರಿಕರಗಳಿಂದ ಹೊರತಾಗಿ ತನಗೆ ತಾನೇ ಎಂಬಂತೆ ಸ್ವತಂತ್ರವಾಗಿ ಉಪಯೋಗಿಸುವಂತಿಲ್ಲ. ಯಾವುದರಲ್ಲಿ ಔಚಿತ್ಯ ಬೇಕು ಎಂಬುದನ್ನು, ಯಾವುದಕ್ಕಾಗಿ ಔಚಿತ್ಯವಿರಬೇಕು ಎಂಬುದನ್ನು, ಮೊದಲು ಗ್ರಹಿಸಬೇಕು. ರಸಕ್ಕಾಗಿ ಔಚಿತ್ಯವೇ ಹೊರತು ಅದು ತನಗೆ ತಾನೇ ಇಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳುತ್ತಾನೆ. ಇತರ ಮೂಲಪರಿಕರಗಳ ಸಾಮರಸ್ಯವೇ ಔಚಿತ್ಯ, ಗುಣ ಅಲಂಕಾರ ರೀತಿ ಇತ್ಯಾದಿಗಳೆಲ್ಲದರ ಔಚಿತ್ಯ, ರಸಪ್ರತೀತಿಗೆ ಸಹಾಯಕ, ಆದುದರಿಂದ ಔಚಿತ್ಯವೊಂದೇ ಕಾವ್ಯದ ಗುರಿ ಎನ್ನುವಂತಿಲ್ಲ. ರಸಪ್ರತೀತಿಗೆ ಇದು ಸಹಾಯಕ,: ಧ್ವನಿಯ ಮೂಲಕ ಅದು ಸಾಧ್ಯವಾಗುತ್ತದೆ. ಔಚಿತ್ಯ ಎನ್ನುವುದರಲ್ಲಿ ಯೇ 'ರಸಧ್ವನಿ' ಎಂಬ ಮಾತು ಅಡಗಿದೆ ಎನ್ನುತ್ತಾನೆ ಅಭಿನವಗುಪ್ತ, ಔಚಿತ್ಯದಿಂದ ಧ್ವನಿ, ಧ್ವನಿಯಿಂದ ರಸ ಇದನ್ನು 'ಔಚಿತ್ಯವತ್ ರಸಧ್ವನಿ' ಎಂಬ ಮಾತು ಅರ್ಥವತ್ತಾಗಿ ಸೂಚಿಸುತ್ತದೆ. ಹೀಗೆ ಔಚಿತ್ಯ ಧ್ವನಿ ರಸಗಳು ಒಂದರಿಂದ ಒಂದು ಬೆಳೆದು ಪೂರ್ಣಗೊಳ್ಳುವ ಕಾವ್ಯಚೈತನ್ಯದ ಮೂರು ಮುಖಗಳಾಗುತ್ತವೆ.

**ಭೋಜ** 'ಶೃಂಗಾರಪ್ರಕಾಶ'.(ಔಚಿತ್ಯವು ರಸಪರ್ಯವಸಾಯಿ) ಸನ್ನಿವೇಶಕ್ಕನುಗುಣವಾಗಿ ಶಬ್ದ ಸಂಪತ್ತನ್ನು ಬಳಸಿ ಉದ್ದೇಶಿತ ಪರಿಸರವನ್ನು ನಿರ್ಮಿಸುವುದು ಕವಿಯ ಒಂದು ವಿಶಿಷ್ಟಶಕ್ತಿ.
**ಅಪದ ದೋಷ**:- ಸನ್ನಿವೇಶಕ್ಕೆ ಅನುಗುಣವಲ್ಲದ ಶಬ್ದಗಳನ್ನು ಕವಿ ಬಳಸಿದರೆ ಅದು 'ಅಪದ' ಎಂಬ ದೋಷವಾಗುತ್ತದೆ.
**ವಿರಸ**:-ವಾಕ್ಯಾರ್ಥದೋಷವನ್ನು ವಿರಸ ಎಂದು ಕರೆಯುತ್ತಾನೆ. '

ಲೋಕವಿರುದ್ಧ' 'ಕಲಾವಿರುದ್ಧ' ದೋಷಗಳನ್ನು ಹೇಳುತ್ತಾನೆ. ಇವು ಅನೌಚಿತ್ಯದ ಕೆಲವು ಉದಾಹರಣೆಗಳು.
**'ಔಚಿತ್ಯವಿರುದ್ಧ'**:- 'ಪಾಮರ'ನೊಬ್ಬನು ಅತಿ ಅಲಂಕೃತವಾದ ಉಡುಗೆಗಳನ್ನು ಧರಿಸುವುದು. ಅಲಂಕಾರಗಳ ನಿರೂಪಣೆಯ ಸಂದರ್ಭದಲ್ಲಿಯೂ ಔಚಿತ್ಯದ ಪ್ರಸ್ತಾಪ ಬರುತ್ತದೆ. ಹಾಗೆಯೇ
**ಛಂದೋ ಔಚಿತ್ಯ**:- ಛಂದಸ್ಸಿನಲ್ಲಿಯೂ ಔಚಿತ್ಯವಿರಬೇಕೆಂಬುದನ್ನು ಭೋಜ ಗುರುತಿಸಿದ್ದಾನೆ. ಭಾವಕ್ಕನುಗುಣವಾಗಿ ಛಂದಸ್ಸು ಮೂಡಿಬರಬೇಕೆನ್ನುತ್ತಾನೆ. 'ಅರ್ಥಾನುರೂಪಚ್ಛಂದಂ' ಎನ್ನುವ ಮಾತು ಅದನ್ನು ಸೂಚಿಸುತ್ತದೆ. ಈ ಎಲ್ಲ ಔಚಿತ್ಯಗಳನ್ನು ರಸಕ್ಕೆ ಅನ್ವಯಿಸಿ ವಿವೇಚಿಸುವುದನ್ನು ಆತ ಮರೆಯುವುದಿಲ್ಲ. ಕಥಾನಿರೂಪಣೆಗೂ ಇದನ್ನು ವಿಸ್ತರಿಸಿ 'ಅನೌಚಿತ್ಯಪರಿಹಾರ' ಎಂದು ಅದನ್ನು ಕರೆಯುತ್ತಾನೆ.

**ಕುಂತಕ**:-ಕವಿಮನೋಧರ್ಮವನ್ನನುಸರಿಸಿ ಕಾವ್ಯಮಾರ್ಗಗಳನ್ನು ಹೇಳಿದ ಮೊಟ್ಟಮೊದಲನೆಯ ಆಲಂಕಾರಿಕ. ಸುಕುಮಾರಮಾರ್ಗ, ವಿಚಿತ್ರಮಾರ್ಗ, ಮತ್ತು ಮಧ್ಯಮಮಾರ್ಗ-ಇವು ಮೂರು ಆತ ಹೇಳಿದ ಮಾರ್ಗಗಳು. ಈ ಒಂದೊಂದು ಮಾರ್ಗಕ್ಕೂ ಕೆಲವು ಗುಣಗಳನ್ನು ಹೇಳಿ ಆಯಾ ಮಾರ್ಗಕ್ಕನುಗುಣವಾಗಿ ಗುಣಗಳ ಸ್ವರೂಪ ಬದಲಾಗುತ್ತದೆಂದು ಆಯಾ ಗುಣಗಳನ್ನು ವಿವೇಚಿಸುತ್ತಾನೆ. ಆದರೆ ಈ ಎಲ್ಲ ಮಾರ್ಗಗಳಿಗೂ ಏಕಪ್ರಕಾರವಾಗಿ ಅನ್ವಯಿಸುವ ಎರಡು ಗುಣಗಳನ್ನು ಹೇಳುತ್ತಾನೆ. ಅವುಗಳಲ್ಲಿ ಒಂದು ಔಚಿತ್ಯ, ಇನ್ನೊಂದು ಸೌಭಾಗ್ಯ, ಈ ಎರಡು ಗುಣಗಳನ್ನು 'ಸಾಧಾರಣಗುಣ'(ಎಂದರೆ ಎಲ್ಲ ಮಾರ್ಗಗಳಲ್ಲಿಯೂ ಇರಲೇಬೇಕಾದ ಏಕಪ್ರಕಾರವಾದ ಗುಣ)ಗಳೆಂದು ಕರೆಯುತ್ತಾನೆ. ವಿಶಿಷ್ಟ ಅಥವಾ 'ಅಸಾಧಾರಣಗುಣ'ಗಳು ಮೂರು ಮಾರ್ಗಗಳ ಸ್ವರೂಪವನ್ನು ನಿರ್ಣಯಿಸುವಂತಹವುಗಳು. ಆದರೆ ಔಚಿತ್ಯ ಸೌಭಾಗ್ಯಗಳು ಮೂರೂ ಮಾರ್ಗಗಳಲ್ಲಿಯೂ ಏಕರೂಪವಾಗಿ ಇರಲೇ ಬೇಕಾದ ಅನಿವಾರ್ಯವಾದ ಗುಣಗಳು. ಕುಂತಕನ ಈ ನಿರೂಪಣೆ ಔಚಿತ್ಯದ ಅನಿವಾರ್ಯತೆಯನ್ನು ಎತ್ತಿ ಹಿಡಿಯುತ್ತದೆ.

**ಔಚಿತ್ಯ'ದಲ್ಲಿಯ ಎರಡು ಬಗೆಗಳು**
ಔಚಿತ್ಯ'ದಲ್ಲಿ ಕುಂತಕ 'ಉಚಿತಾಖ್ಯಾನ' ಮತ್ತು 'ವಾಚ್ಯಂ ಶೋಭಾತಿಶಾಯಿನಾ' ಎಂಬ ಎರಡು ಬಗೆಗಳನ್ನು ಗುರುತಿಸಿದ್ದಾನೆ. ಇವು ಅಭಿವ್ಯಕ್ತಿಯ ಶಕ್ತಿಯನ್ನು ಉದ್ದೀಪನ ಗೊಳಿಸುತ್ತವೆ. ಕಾವ್ಯಪರಿಕರಗಳ ಎಲ್ಲ ಅಂಶಗಳನ್ನು ಒಳಗೊಳ್ಳುವಷ್ಟು ವ್ಯಾಪಕವಾದ ದೃಷ್ಟಿ ಇವುಗಳಲ್ಲಿದೆ. ರಸದ ಪಾರಮ್ಯವನ್ನು ಗ್ರಹಿಸಿದ ಕುಂತಕ ಅದಕ್ಕೆ ಅನ್ವಯವಾಗುವಂತೆ ಔಚಿತ್ಯ ಬರಬೇಕೆಂಬುದನ್ನು ಒತ್ತಿ ಹೇಳುತ್ತಾನೆ.
**ಶಬ್ದಾರ್ಥಪಾರಮಾರ್ಥ್ಯ'**:-ಕಾವ್ಯದಲ್ಲಿ ಶಬ್ದ ಮತ್ತು ಅರ್ಥಗಳ ಮಹತ್ವವನ್ನು ವಿವರಿಸುತ್ತಾ ಇವೆರಡರ 'ಪಾರಮಾರ್ಥ್ಯ'ವನ್ನು ಗಮನಿಸುತ್ತಾನೆ.
ಶಬ್ದಾರ್ಥಪಾರಮಾರ್ಥ್ಯ' ಎಂದು ಕರೆಯುತ್ತಾನೆ. ಇದರಲ್ಲಿ 'ಅರ್ಥಪಾರಮಾರ್ಥ್ಯ'ವೇ 'ಅರ್ಥೌಚಿತ್ಯ' ಎಂಬುದು ಸ್ಪಷ್ಟವಾಗುತ್ತದೆ. ಈ ಶಬ್ದಾರ್ಥಪಾರಮಾರ್ಥ್ಯ' ಇಲ್ಲದಿರುವುದರ: ಉದಾಹರಣೆಯನ್ನು ತೆಗೆದುಕೊಂಡು ವಿವೇಚಿಸುತ್ತಾನೆ. ಆ ಪದ್ಯದಲ್ಲಿರುವ ರಾಮ ಸೀತೆಯರ ಪಾತ್ರದ ಘನತೆಗೆ ಅದರಿಂದ ಕುಂದುಂಟಾಗಿರುವುದನ್ನು ತೋರಿಸಿಕೊಡುತ್ತಾನೆ. ಇದು 'ಪ್ರಕೃತೌಚಿತ್ಯ'ಕ್ಕೂ ವಿರೋಧವಾಗುತ್ತದೆಂಬುದನ್ನು ಸ್ಪಷ್ಟಪಡಿಸುತ್ತಾನೆ. *
ಆನಂದವರ್ಧನ ಹೇಳಿದ 'ಸಂಘಟನೌಚಿತ್ಯ' 'ಗುಣೌಚಿತ್ಯ' ಮೊದಲಾದುವುಗಳನ್ನು ಈತನೂ ತನ್ನದೇ ಆದ ರೀತಿಯಲ್ಲಿ ಹೇಳಿದ್ದಾನೆ. ಅಕ್ಷರವಿನ್ಯಾಸವೂ ರಸಗಳಿಗೆ ಉಚಿತ ವಾಗಿರುವಂತೆ ಅಭಿವ್ಯಕ್ತಗೊಳ್ಳಬೇಕೆಂಬುದನ್ನು ಸೂಚಿಸುತ್ತಾ ಅದನ್ನು 'ವರ್ಣವಕ್ರತೆ' ಎಂದು ಕರೆಯುತ್ತಾನೆ. ಈ ವರ್ಣವಕ್ರತೆಯನ್ನು ಸಾಧಿಸುವುದು ವರ್ಣೌ ಚಿತ್ಯ. ಶಬ್ದಾಲಂಕಾರಗಳಾದ ಪ್ರಾಸ ಅನುಪ್ರಾಸಾದಿಗಳಲ್ಲಿಯೂ ಇದು ವ್ಯಕ್ತವಾಗುತ್ತದೆ. ಅಲಂಕಾರೌಚಿತ್ಯದ ಮೂಲ ತತ್ವವೆಂದರೆ ಅಲಂಕಾರಗಳು ಸಹಜವಾಗಿ ತಮಗೆ ತಾವೇ ಆವಿರ್ಭವಿಸಬೇಕು. ಮತ್ತು ಸುಲಭಗ್ರಾಹ್ಯವಾಗಿ ರಸಾನುಭವಕ್ಕೆ ಕಾರಣವಾಗುವಂತಿರಬೇಕು ಎಂಬುದು. ಈ ಸಂದರ್ಭ ದಲ್ಲಿ ಆತ ಹೇಳುವ:

"ನಾತಿನಿರ್ಬಂಧವಿಹಿತಾ ನಾಪ್ಯಪೇಶಲಭೂಷಿತಾ | ಪೂರ್ವಾವೃತ್ತ ಪರಿತ್ಯಾಗ ನೂತನಾವರ್ತನೋಜ್ಜ್ವಲಂ ||"

ಎಂಬ ಮಾತನ್ನು ನೋಡಬಹುದು. ಇಲ್ಲಿ ಕುಂತಕ, ಆನಂದವರ್ಧನ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸಂವಾದಿಯಾಗಿರುವುದು ಕಾಣುತ್ತದೆ.

ಇಲ್ಲಿ ಕುಂತಕ ಔಚಿತ್ಯದ ಇನ್ನೊಂದು ಅಂಶವನ್ನು ಎತ್ತಿ ಹೇಳುತ್ತಾನೆ; ಅದೆಂದರೆ ಕಿವಿಗೆ ಹಿತಕರವಾದ ಪದಪ್ರಯೋಗ. 'ಶೀರ್ಣ ಘ್ರಾಣಾಂಘ್ರಿ' ಮೊದಲಾದ ಶ್ರುತಿಕಷ್ಟವಾದ ಪದಗಳ ಪ್ರಯೋಗ ಔಚಿತ್ಯವನ್ನು ಮೀರಿ ಅನೌಚಿತ್ಯಕ್ಕೆ ಗುರಿಯಾಗುತ್ತದೆಂಬುದನ್ನು ಸ್ಪಷ್ಟ ಪಡಿಸುತ್ತಾನೆ. ಕ್ಷೇಮೇಂದ್ರ ಮುಂದೆ ಇದನ್ನು ದೀರ್ಘವಾಗಿ ವಿವೇಚಿಸುತ್ತಾನೆ.
ಪದವಿನ್ಯಾಸದಂತೆಯೇ ಭಾಷಾಪ್ರಯೋಗದಲ್ಲಿ, ವಸ್ತುವಿನ ಬೆಳವಣಿಗೆಯಲ್ಲಿ, ಪಾತ್ರದಲ್ಲಿ ಹೀಗೆ ಕಾವ್ಯದ ಎಲ್ಲ ಅಂಗಗಳಲ್ಲಿಯೂ ಕಂಡು ಬರುವ ಔಚಿತ್ಯವನ್ನು ಕುಂತಕ ಪ್ರಸ್ತಾಪಿಸಿದ್ದಾನೆ. 'ವಕ್ರೋಕ್ತಿ' ಸಿದ್ಧಾಂತ ಪ್ರತಿಪಾದಕನಾದ ಈತ ಔಚಿತ್ಯ ಎನ್ನುವುದು 'ವಕ್ರೋಕ್ತಿ' ಎನ್ನುವುದಕ್ಕೆ ಇನ್ನೊಂದು ಹೆಸರು ಎನ್ನುವಷ್ಟರಮಟ್ಟಿಗೆ ಅದಕ್ಕೆ ಪ್ರಾಧಾನ್ಯವನ್ನು ಕೊಟ್ಟು ಪ್ರತಿಪಾದಿಸಿದ್ದಾನೆ.

**ಮಹಿಮಭಟ್ಟ**:- (**'ವ್ಯಕ್ತಿ ವಿವೇಕ'**)
ಧ್ವನಿತತ್ವವನ್ನು ವಿರೋಧಿಸಿದರೂ ರಸ ಮತ್ತು ಔಚಿತ್ಯಕ್ಕೆ ವಿಶೇಷ ಪ್ರಾಧಾನ್ಯವನ್ನು ಕೊಟ್ಟಿದ್ದಾನೆ. ಈ ವಿಚಾರದಲ್ಲಿ ಆನಂದವರ್ಧನನನ್ನು ಆತ ಸಂಪೂರ್ಣವಾಗಿ ಒಪ್ಪುತ್ತಾನೆ. ಅನೌಚಿತ್ಯವೇ ರಸಭಂಗಕ್ಕೆ ಕಾರಣವೆಂದು ಹೇಳಿದ ಆನಂದವರ್ಧನನ ಮಾತನ್ನು ಉದಾಹರಿಸಿ ಅದರಿಂದ ಸಂಭವಿಸುವ ಪ್ರಧಾನವಾದ ಐದು ದೋಷಗಳನ್ನು ವಿವೇಚಿಸುತ್ತಾನೆ. ಆತನ 'ವ್ಯಕ್ತಿ ವಿವೇಕ'ದ
ಎರಡನೆಯ ಅಧ್ಯಾಯದ ಪ್ರಮುಖವಾದ ವಿಷಯ ಇದೇ. 'ವಿಧೇಯಾವಿಮರ್ಶೆ' 'ಪ್ರಕ್ರಮಭೇದ', 'ಕ್ರಮಭೇದ', 'ಪೌನರುಕ್ತ್ಯ' ಮತ್ತು 'ವಾಚ್ಯಾವಚನ'-ಇವು ಆ ಐದು ದೋಷಗಳು, ರಸಪ್ರತೀತಿಗೆ ವಿಘ್ನಕಾರಕಗಳಾದ ಈ ಐದು ದೋಷಗಳು ಶಬ್ದದಲ್ಲಿ ಕಂಡುಬರುವ ಅನೌಚಿತ್ಯದ ಪರಿಣಾಮವಾಗಿ ಉಂಟಾಗುವಂತಹವುಗಳು, ಶಬ್ದಾನೌಚಿತ್ಯಗಳು. ಇವುಗಳಲ್ಲದೆ ರಸ ಮತ್ತು ಅರ್ಥ ಅಥವಾ 'ವಸ್ತು'ವಿಗೆ ಸಂಬಂಧಿಸಿದ ಅನೌಚಿತ್ಯಗಳನ್ನು ಅಂತರಂಗ ಮತ್ತು ಬಹಿರಂಗದ ಅನೌಚಿತ್ಯಗಳನ್ನಾಗಿ ಪರಿಗಣಿಸಿ ದೀರ್ಘವಾಗಿ ವಿವೇಚಿಸುತ್ತಾನೆ. ಅವುಗಳ ವಿವರಗಳಿಗೆ ಹೋಗದೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ವೆಂದರೆ 'ಔಚಿತ್ಯ'ವೇ ರಸಕ್ಕೆ ಕಾರಣವಾದ ಮೂಲತತ್ವವೆಂಬುದನ್ನು ಆತ ಪ್ರಬಲವಾಗಿ ಪ್ರತಿಪಾದಿಸಿರುವುದನ್ನು. ಹೀಗೆ ಸಾಮಾನ್ಯವಾಗಿ ಎಲ್ಲ ಆಲಂಕಾರಿಕರಿಂದಲೂ ಒಂದಲ್ಲ ಒಂದು ರೂಪದಲ್ಲಿ ಬೆಳೆದುಬಂದ ಔಚಿತ್ಯ, ಕ್ಷೇಮೇಂದ್ರನಲ್ಲಿ ಒಂದು ಸ್ವತಂತ್ರಸಿದ್ಧಾಂತ ವಾಗಿಯೆ ರೂಪುಗೊಂಡಿತು.

"ಅಲಂಕಾರಸ್ತ್ವಲಂಕಾರಾಃ ಗುಣಾ ಏವ ಗುಣಾಃ ಸದಾ | ಔಚಿತ್ಯಂ ರಸಸಿದ್ಧಸ್ಯ ಸ್ಥಿರಂ ಕಾವ್ಯಸ್ಯ ಜೀವಿತಂ | (M)

'ಅಲಂಕಾರಗಳು ಅಲಂಕಾರಗಳೇ, ಗುಣಗಳೂ ಯಾವಾಗಲೂ ಗುಣಗಳೇ. ರಸಸಿದ್ಧವಾದ ಕಾವ್ಯಕ್ಕೆ ಔಚಿತ್ಯವೊಂದೇ ಸ್ಥಿರವಾದ ಜೀವ. ಅಂದರೆ ಅಲಂಕಾರ ಗುಣಾದಿಗಳೆಲ್ಲಾ ಔಚಿತ್ಯದಿಂದ ನಿಯಂತ್ರಿತವಾಗಿರಬೇಕು. ಇದೇ ಕಾವ್ಯದ ಜೀವಿತ. 'ಆತ್ಮ' ಮತ್ತು 'ಜೀವಿತ' ಇವುಗಳಲ್ಲಿ ಸೂಕ್ಷ್ಮ ಭೇದವನ್ನು ಈತ ಕಲ್ಪಿಸುತ್ತಾನೆ. 'ಆತ್ಮ' ಎಂದರೆ 'ಸಾರಭೂತಾರ್ಥ' ರಸವೇ ಕಾವ್ಯದ ಸಾರಭೂತಾರ್ಥ'. ಈ ಸಾರಭೂತವಾದ ಅರ್ಥಪ್ರತೀತಿಗೆ ಕಾರಣವಾದ ಪ್ರಾಣಶಕ್ತಿಯೇ ಔಚಿತ್ಯ.

"ಉಚಿತಾಸ್ಥಾನವಿನ್ಯಾಸದಲಂಕೃತಿರಲಂಕೃತಿಃ | ಔಚಿತ್ಯಾದಚ್ಯುತಾ ನಿತ್ಯಂ ಭವನ್ತ್ಯೇವ ಗುಣಾ ಗುಣಾಃ ॥".(೬)

ಉಚಿತವಾದ ಸ್ಥಾನದಲ್ಲಿರಿಸಿದಾಗಲೇ ಅಲಂಕಾರವು ಅಲಂಕಾರವಾಗುತ್ತದೆ. ಔಚಿತ್ಯದಿಂದ ಚ್ಯುತವಾಗದೇ ಇದ್ದಾಗ ಮಾತ್ರ ಗುಣಗಳು ಗುಣಗಳಾಗುತ್ತವೆ.

"ಕಂಠೇ ಮೇಖಲಾಯ ನಿತಂಬಫಲಕೇ ತಾರೇಣ ಹಾರೇಣ ವಾ ಪಾಣೌ ನೂಪುರಬಂಧನೇನ ಚರಣೇ ಕೇಯೂರಪಾಶೇನ ವಾ | ಶೌರ್ಯೇ ಣ ಪ್ರಣತೇ ರಿಪೌ ಕರುಣಯಾ ನಾಯಂತಿ ಕೇ ಹಾಸ್ಯತಾ/ಮೌಚಿತ್ಯೇನ ವಿನಾ ರುಚಿಂ ಪ್ರತನುತೇ ನಾಲಂಕೃತಿರ್ನೋ ಗುಣಾಃ ||".

ಅಂದರೆ ಕೊರಳಿನಲ್ಲಿರುವ ಡಾಬು, ಸೊಂಟದಲ್ಲಿರುವ ಹಾರ, ಕೈಯಲ್ಲಿ ನೂಪುರಗೆ ಹೀಗೆ ಧರಿಸಿದ ಒಡವೆಗಳಿಂದಲೂ, ಅಂತೆಯೇ ಶರಣಾಗತನಾದವನ ಮೇಲೆ ಪರಾಕ್ರಮ, ಶತ್ರುವಿನ ಮೇಲೆ ಕರುಣೆ ಇಂತಹ ಗುಣಗಳಿಂದಲೂ ಯಾರು ತಾನೇ ಹಾಸ್ಯಕ್ಕೆ ಗುರಿಯಾಗುವುದಿಲ್ಲ? ಔಚಿತ್ಯದ ಹೊರತಾಗಿ ಅಲಂಕಾರಗಳಾಗಲೀ ಗುಣಗಳಾಗಲೀ ಮನೋಹರವೆನಿಸುವುದಿಲ್ಲ ಎನ್ನುವ ಈ ಮಾತಿನಲ್ಲಿ ಔಚಿತ್ಯವೇ ಕಾವ್ಯದ ಸಾರಸರ್ವಸ್ವ ವೆಂಬುದನ್ನೂ ಅನೌಚಿತ್ಯ ಹಾಸ್ಯಕ್ಕೆ ಕಾರಣವಾಗುತ್ತದೆಂಬುದನೂ ಸೂಚಿಸಿದ್ದಾನೆ.

### ಔಚಿತ್ಯದ ಕುರಿತ ಕ್ಷೇಮೇಂದ್ರನ ವಿಚಾರಗಳು

"ಉಚಿತಂ ಪ್ರಾಹುರಾಚಾರ್ಯ: ಸದೃಶಂ ಕಿಲ ಯಸ್ಯ ಯತ್ | ಉಚಿತಸ್ಯ ಚ ಯೋ ಭಾವಸ್ತದೌಚಿತ್ಯಂ ಪ್ರಚಕ್ಷತೇ ॥ (೭)
ಯಾವುದು ಯಾವುದಕ್ಕೆ ಯುಕ್ತವಾಗಿರುವುದೋ ಅದನ್ನೇ ವಿದ್ವಾಂಸರು 'ಉಚಿತ' ಎಂದು ಕರೆಯುತ್ತಾರೆ. 'ಉಚಿತ'ದ ಆ ಭಾವವೇ 'ಔಚಿತ್ಯ' ಎನಿಸಿಕೊಳ್ಳುತ್ತದೆ ಹೀಗೆ ಔಚಿತ್ಯದ ಲಕ್ಷಣವನ್ನು ಹೇಳಿ ಅದರ ಸ್ವರೂಪನ್ನು ಸ್ಪಷ್ಟಪಡಿಸುತ್ತಾನೆ.

### ಔಚಿತ್ಯದ 27 ವಿಧಗಳು

"ಪದೇ ವಾಕ್ಯೇ ಪ್ರಬಂಧಾರ್ಥ ಗುಣೇಽಲಂಕರಣೇ ರಸೇ | ಕ್ರಿಯಾಯಾಂ ಕಾರಕೇ ಲಿಂಗೇ ವಚನೇ ಚ ವಿಶೇಷಣೇ ||ಲ//
ಉಪಸರ್ಗ ನಿಪಾತೇ ಚ ಕಾಲೇ ದೇಶೇ ಕುಲೇ ವ್ರತೇ | ತತ್ತ್ವ ಸತ್ತ್ವೇಽಭಿಪ್ರಾಯೇ ಸ್ವಭಾವೇ ಸಾರಸಂಗ್ರಹೇ ॥ (೯)
ಪ್ರತಿಭಾಯಾಮವಸ್ಥಾಯಾಂ ವಿಚಾರೇ ನಾಮ್ನ್ಯ ಥಾಶಿಷಿ ! ಕಾವ್ಯಸ್ಯಾಂಗೇಷು ಚ ಪ್ರಾಹುರೌಚಿತ್ಯಂ ವ್ಯಾಪಿ ಜೀವಿತಂ ॥ (೧೦)
"ಪದ, ವಾಕ್ಯ, ಪ್ರಬಂಧಾರ್ಥ, ಗುಣ, ಅಲಂಕಾರ, ರಸ, ಕ್ರಿಯಾಪದ, ಕಾರಕ, ಲಿಂಗ, ವಚನ, ವಿಶೇಷಣ, ಉಪಸರ್ಗ, ನಿಪಾತ, ಕಾಲ, ದೇಶ, ಕುಲ, ವ್ರತ, ತತ್ತ್ವ, ಸತ್ತ್ವ, ಅಭಿಪ್ರಾಯ, ಸ್ವಭಾವ, ಸಾರಸಂಗ್ರಹ, ಪ್ರತಿಭೆ, ಅವಸ್ಥೆ, ವಿಚಾರ, ಹೆಸರು, ಆಶಂಸನೆ-ಹೀಗೆ ಈ ಎಲ್ಲಾ ಕಾವ್ಯಾಂಗಗಳಲ್ಲಿಯೂ ವ್ಯಾಪಿಸಿರುವ ಔಚಿತ್ಯವೇ ಕಾವ್ಯದ ಜೀವಿತ ಎಂದು ಹೇಳಿ ಇಲ್ಲಿ ಹೇಳಿದ ಈ ಇಪ್ಪತ್ತೇಳು ಔಚಿತ್ಯಗಳನ್ನು ಉದಾಹರಣೆಗಳ ಸಹಿತ ವಿವರಿಸಿ ಈ ಕೃತಿಯನ್ನು ಮುಕ್ತಾಯಗೊಳಿಸಿದ್ದಾನೆ.

**ಪದೌಚಿತ್ಯ**:- "ತಿಲಕಂ ಬಿಭೃತೀ ಸೂಕ್ತಿ ರ್ಭಾತ್ಯೇಕಮುಚಿತಂ ಪದಮ್ | ಚಂದ್ರಾನನೇವ ಕಸ್ತೂರೀಕೃತಂ ಶ್ಯಾಮೇವ ಚಂದನಮ್ ॥ (೧೧)
ಅಂದರೆ "ತಿಲಕದಂತಿರುವ ಒಂದೇ ಉಚಿತವಾದ ಪದವನ್ನೊಳಗೊಂಡ ಸೂಕ್ತಿಯು ಕೂಡ ಕಸ್ತೂರಿಯ ತಿಲಕವನ್ನಿಟ್ಟುಕೊಂಡ ಚಂದ್ರಾನನೆಯಂತೆಯೂ, ಶ್ರೀಗಂಧದ ತಿಲಕವನ್ನಿಟ್ಟು, ಕೊಂಡ ಶ್ಯಾಮಲ ಯುವತಿಯಂತೆಯೂ ಶೋಭಿಸುತ್ತದೆ". ಎನ್ನುವ ಈ ಮಾತಿನಲ್ಲಿ ಆನಂದವರ್ಧನ ಪದಧ್ವನಿಯನ್ನು ಕುರಿತು ಹೇಳಿದ ಮಾತಿನ ಪ್ರಭಾವ ಕಾಣುತ್ತದೆ. 'ವಿಚ್ಛಿತ್ತಿ ಶೋಭಿನ್ಯೆಕೇನ ಭೂಷಣೇನೇವ ಭಾಮಿನಿ' ಎಂದು ಮುಂತಾಗಿ ಆತ ಹೇಳಿದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 'ರಮಣೀಯವಾಗಿ ಶೋಭಿಸುವ ಒಂದೇ ಆಭರಣದಿಂದ ಕಾಮಿನಿ ಹೇಗೆ ಕಳೆಗೂಡುವಳೋ ಹಾಗೆ ಒಂದು ಪದವು ಹೊಳೆಯಿಸುವ ಧ್ವನಿಯಿಂದಲೇ ಸುಕವಿಯ ವಾಣಿ ಕಳೆಗೂಡುತ್ತದೆ' ಎನ್ನುತ್ತಾನೆ ಆನಂದವರ್ಧನ. ಹೀಗೆ ಧ್ವನಿಯನ್ನು ಹೊಳೆಯಿಸಿ ತೋರುವಂತಹ ಪ್ರದಪ್ರಯೋಗವೇ ಪದೌಚಿತ್ಯ. ಇಲ್ಲಿ ಕ್ಷೇಮೇಂದ್ರ, ಧ್ವನಿಯನ್ನು ಪ್ರಧಾನವಾಗಿ ಪ್ರತಿಪಾದಿಸದಿದ್ದರೂ ಇದರ ಹಿಂದಿರುವ ಮೂಲತತ್ತ್ವ ಧ್ವನಿ, ಈ ಮೂಲಕ ರಸ.
**ಉದಾ**:-ವಿರಹಾವಸ್ತು ಸೂಚಕಮ್ ಕೃಶಾಂಗ್ಯಾಃ ಇತಿ ಪದಮ್ ಪರಮಮ್ ಔಚಿತ್ಯಂ ಪುಷ್ಣಾತಿ' ಎಂದು ವಿವರಿಸುತ್ತಾನೆ. ಅಂದರೆ ವಿರಹಾವಸ್ಥೆಯನ್ನು ಸೂಚಿಸುವ 'ಕೃಶಾಂಗಿ' ಎಂಬ ಪದ ಅತ್ಯಂತ ಔಚಿತ್ಯದಿಂದ ಕೂಡಿದೆ.

**ವಾಕ್ಯೌಚಿತ್ಯ**:- ವಾಕ್ಯದಲ್ಲಿ ಬರುವ ಅರ್ಥ, ಸನ್ನಿವೇಶಕಕ್ಕನುಗುಣವಾಗಿದ್ದು
ಕಾವ್ಯವಿವೇಚನಾವಿಚಕ್ಷಣರಿಗೆ ಪ್ರಿಯವಾಗು ವಂತಿರಬೇಕು.
ಔಚಿತ್ಯರಚಿತಂ ವಾಕ್ಯಂ ಸತತಂ ಸಂಮತಂ ಸತಾಮ್ | ತ್ಯಾಗೋದಗ್ರಮಿವೈಶ್ವರ್ಯಂ ಶೀಲೋಜ್ಜ್ವಲಮಿವ ಶ್ರುತಮ್ ॥ (೧೨)
ಎಂದು ಇದನ್ನು ಹೇಳಿದ್ದಾನೆ. ಔಚಿತ್ಯಪೂರ್ಣವಾದ ವಾಕ್ಯ ಸಹೃದಯರಿಗೆ ಯಾವಾಗಲೂ ಮೆಚ್ಚುಗೆಯಾಗುತ್ತದೆ. ಅದು ಹೇಗೆಂಬುದನ್ನು ಎರಡು ಸಾದೃಶ್ಯಗಳಿಂದ ಹೇಳುತ್ತಾನೆ-ತ್ಯಾಗದಿಂದ ಶೋಭಿಸುವ ಐಶ್ವರದಂತೆ, ಶೀಲದಿಂದ ಬೆಳಗುವ ವಿದ್ಯೆಯಂತೆ ಎಂಬುದಾಗಿ. ಇದಕ್ಕೆ ಕ್ಷೇಮೇಂದ್ರ ತನ್ನದೇ ಆದ ಕಾವ್ಯ 'ವಿನಯವಲ್ಲಿ'ಯಿಂದ ಒಂದು ಉದಾಹರಣೆ ಕೊಡುತ್ತಾನೆ:
"ದೇವೋ ದಯಾವಾನ್ ವಿಜಯೋ ಜಿತಾತ್ಮಾ ಯಮೌ ಮನಃಸಂಯಮಮಾನನೀಯೌ | ಇತಿ ಬ್ರುವಾಣಃ ಸ್ವಭುಜಂ ಪ್ರಮಾರ್ಷ್ಟಿ ಯಃ ಕೀಚಕಾಕಾಲಿಕಾ ಕಾಲದಂಡಮ್ ॥ ಧೀರಃ ಸ ಕಿಮ್ಮಿರಜಟಾಸುರಾರಿ: ಕುಬೇರಶೌರಪ್ರಶಮೋಪದೇಷ್ಟಾ | ದೃಷ್ಟೋ ಹಿಡಿಂಬಾದಯಿತಃ ಕುರೂಣಾಂ ಪರ್ಯನ ರೇಖಾಗಣನಾಕೃತಾಂತ: li
ಇದು ಭೀಮಸೇನನು ಕಣ್ಣಿಗೆ ಬಿದ್ದುದರ ವರ್ಣನೆ. 'ಅಣ್ಣ ದಯಾಳುವಾಗಿದ್ದಾನೆ, ಅರ್ಜುನ ಜಿತೇಂದ್ರಿಯನಾಗಿದ್ದಾನೆ, ಯಮಳರು ಮನೋನಿಗ್ರಹದಿಂದ ಮನನೀಯರಾಗಿದ್ದಾರೆ'-ಹೀಗೆಂದು ಹೇಳಿಕೊಳ್ಳುತ್ತಾ ಕೀಚಕನ ಅಕಾಲಮೃತ್ಯುವಿಗೆ ಕಾಲದಂಡಸ್ವರೂಪನಾದ ತನ್ನ ಭುಜಗಳನ್ನು ಸವರಿಕೊಳ್ಳುವ ಧೀರ, ಕಿಮ್ಮಿರಜಟಾಸುರಸಂಹಾರಕ, ಕುಬೇರನ ಶೌರಪ್ರಶಮಪರಿಣತ, ಹಿಡಿಂಬಾರಮಣ, ಕುರುಕುಲಾವಸಾನಕೃತಾಂತನಾದ ಭೀಮಸೇನನು ಕಣ್ಣಿಗೆ ಬಿದ್ದನು-ಎಂಬ ಈ ವಾಕ್ಯ ರೌದ್ರರಸಸ್ವರೂಪಕ್ಕೆ

ಸಜೀವವಾಗಿರುವಂತೆ ಶೋಭಿಸುತ್ತ ದೆಂದು ತನ್ನ ವಿವರಣೆಯನ್ನು ಕೊಡುತ್ತಾನೆ.


**ಪ್ರಬಂಧದಲ್ಲಿ ಔಚಿತ್ಯ**:- ಬಹುಶಃ ಆನಂದವರ್ಧನ ಹೇಳಿದ 'ಪ್ರಬಂಧಧ್ವನಿ'ಯಿಂದ ಇದು ಪ್ರೇರಿತವಾಗಿದ್ದರೂ ಇದಕ್ಕೆ ಕ್ಷೇಮೇಂದ್ರ ಕೊಡುವ ಉದಾಹರಣೆ ಮತ್ತು ವಿವರಣೆಗಳು ಅದರಷ್ಟು ವ್ಯಾಪಕವಾಗಿರುವಂತೆ ತೋರುವುದಿಲ್ಲ. **'ಉಚಿತಾರ್ಥವಿಶೇಷೇಣ ಪ್ರಬಂಧಾರ್ಥ:** ಪ್ರಕಾಶ್ಯತೇ'. ಇಡೀ ಪ್ರಬಂಧವನ್ನೇ ವ್ಯಾಪಿಸಿರುವ ಧ್ವನಿ' ಎನ್ನುವಷ್ಟು ವ್ಯಾಪಕವಾದ ರೀತಿಯಲ್ಲಿ 'ಪ್ರಬಂಧಧ್ವನಿ' ಬೆಳೆದರೆ 'ಪ್ರಬಂಧೌಚಿತ್ಯ' ಇಡೀ ಪ್ರಬಂಧದ ಸ್ವಾರಸ್ಯಕ್ಕೆ ಕಾರಣವಾಗುವ ಒಂದು ವಿಶಿಷ್ಟ ವರ್ಣನೆಗೆ ಅನ್ವಯಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಕಾಳಿದಾಸನ ಮೇಘದೂತ'ದಿಂದ ಒಂದು ಒಳ್ಳೆಯ ಪದ್ಯವನ್ನು ಉದಾಹರಿಸಿದ್ದಾನೆ. ಪ್ರತಿಭಾಪ್ರಕರ್ಷದಿಂದ ಸಕಲ ಪ್ರಬಂಧಾರ್ಥವನ್ನೂ ಇದು ತರಂಗಿತ ಗೊಳಿಸುತ್ತದೆಂಬುದು ಆತನ ಅಭಿಪ್ರಾಯ.
**ಉದಾ**:-ಮೇಘದೂತ& ಉತ್ತರರಾಮಚರಿತದ ಆನೆಯ ಅಂಕ.
**ಅನೌಚಿತ್ಯ**:-ಕುಮಾರಸಂಭವದಲ್ಲಿ ಅಂಬಿಕಾಸಂಭೋಗ ವರ್ಣನೆ.

**ಗುಣೌಚಿತ್ಯ**:- "ಪ್ರಸ್ತುತಾರ್ಥೋಚಿತಃ ಕಾವ್ಯೇ ಭವ್ಯಃ ಸೌಭಾಗ್ಯವಾನ್ ಗುಣಃ".ಪ್ರಸ್ತುತವಾದ ಅರ್ಥಕ್ಕೆ ಉಚಿತವಾದ ಗುಣ ಮಾತ್ರ ಭವ್ಯ ಮತ್ತು ಸುಂದರ ಎನಿಸಿಕೊಳ್ಳುತ್ತದೆ. ಓಜಸ್ಸು, ಮಾಧುರ್ಯ ಪ್ರಸಾದ ಸೌಕುಮಾರ್ಯ ಇತ್ಯಾದಿ ಗುಣಗಳು ಔಚಿತ್ಯಪೂರ್ಣವಾಗಿ ಬಂದಾಗ ಕಾವ್ಯ, ಸೌಭಾಗ್ಯಸಂಪನ್ನವಾಗಿ ಆನಂದ ಸ್ಯಂದಿಯಾಗುತ್ತದೆಂದು ಹೇಳುತ್ತಾನೆ. ಇದಕ್ಕೆ ಓಜೋಗುಣಪ್ರಧಾನವಾಗಿ ಮೂಡಿಬಂದಿರುವ ಭಟ್ಟನಾರಾಯಣನ 'ವೇಣೀಸಂಹಾರ' ನಾಟಕದ ಒಂದು ಪದ್ಯವನ್ನು ಮೊದಲು ಉದಾಹರಿಸಿದ್ದಾನೆ: "ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಈ ಕವಿಗಳಲ್ಲಿ ಹೆಜ್ಜೆಹೆಜ್ಜೆಗೂ ಇದನ್ನು ಗುರುತಿಸುತ್ತಾ ಹೋಗಬಹುದು. ಗದಾಯುದ್ಧ ಗುಣೌಚಿತ್ಯದ ಗಣಿ. 'ಕುರುಭೂಭೃತ್ ಬಲಕಾಲತೂಲ ಪವನಂ ಕೌರವ್ಯ ಗಂಧೇಭಕೇಸರಿ, ದುಶ್ಶಾಸನ ರಕ್ತರಕ್ತವದನಂ' ಎಂದು ಒಂದು ಕಡೆ ರನ್ನನ ಶೈಲಿ ಭೋರ್ಗರೆದರೆ, ಇನ್ನೊಂದು ಕಡೆ 'ನೀನುಳ್ಳೊಡುಂಟು ರಾಜ್ಯಂ, ನೀನುಳ್ಳೊಡೆ ಪಟ್ಟಮುಂಟು, ಬೆಳ್ಗೊ ಡೆಯುಂಟ್ಟೆ". ಎಂದು ಮುಂತಾಗಿ ಕರುಣೆಯಿಂದ ಹೃದಯವನ್ನು ಮಿಡಿಯುತ್ತದೆ.

**ಅಲಂಕಾರೌಚಿತ್ಯ**:- ಅರ್ಥೌ ಚಿತ್ಯವತಾ ಸೂಕ್ತಿರಲಂಕಾರೇಣ ಶೋಭತೇ'- ಎನ್ನುತ್ತಾನೆ ಕ್ಷೇಮೇಂದ್ರ. ಅಂದರೆ ಪ್ರಸ್ತುತವಾದ ಅರ್ಥಕ್ಕೆ ಉಚಿತವಾದ ರೀತಿಯಲ್ಲಿ ಮಾತ್ರ ಅಲಂಕಾರಗಳು ಬರಬೇಕು.ರಸನಿಯಂತ್ರಿತ'ವಾದುವುಗಳು, ರಸಾಕ್ಷಿಪ್ತವಾಗಿ' ರೂಪಗೊಳ್ಳಬೇಕಾದುವುಗಳು."ಇದು ಪಾತಾಳ ಬಿಲಕ್ಕೆ ಬಾಗಿಲ್, ಇದು ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ...' 'ರಸೆಯಿಂ ಕಾಲಾಗ್ನಿರುದ್ರಂ ಪೊರಮಡುವವೊಲ್' 'ರುದ್ರಾಟ್ಟಹಾಸಂ ಜಲಮಾದತ್ತು....' 'ಶಂಖದಿಂ ಕಡೆದರೋ' 'ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ....' 'ವಡಬಾಗ್ನಿ ಜಡೆವೊತ್ತುದೋ ಸಿಡಿಲು ಹೊಸ ಭಸಿತವಿಡಕಲಿತುದೋ'-ಈ ಮೊದಲಾದ ಅಲಂಕಾರಗಳ ಔಚಿತ್ಯವನ್ನು ಅದರಿಂದ ಸಾಧಿಸಿರುವ ಧ್ವನಿಪರಂಪರೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು".

**ರಸೌಚಿತ್ಯ':-** ವಸಂತಮಾಸ ಅಶೋಕಲತೆಯನ್ನು ಚಿಗುರಿಸುವಂತೆ ಔಚಿತ್ಯರುಚಿರವಾದ ರಸವು ಎಲ್ಲ ಹೃದಯಗಳನ್ನೂ ವ್ಯಾಪಿಸಿ ಮನಸ್ಸನ್ನು ಚಿಗುರಿಸುತ್ತದೆ ಎಂದು ಹೇಳಿ ಶೃಂಗಾರ, ಹಾಸ್ಯ, ಕರುಣ ಮೊದಲಾದ ಎಲ್ಲ ರಸಗಳಿಗೂ ಉದಾಹರಣೆಗಳನ್ನು ಕೊಡುತ್ತಾನೆ.

ಮಹಾಮಹೋಪಾಧ್ಯಾಯ ಪ್ರೊಫೆಸರ್ ಎಸ್. ಕುಪ್ಪುಸ್ವಾಮಿ ಶಾಸ್ತ್ರಿಯಾರ್ ಅವರು ಭಾರತೀಯ ಕಾವ್ಯಮೀಮಾಂಸೆಯ ಎಲ್ಲ ಸಿದ್ಧಾಂತಗಳನ್ನು ಒಳಗೊಂಡು, ಔಚಿತ್ಯದ ಸರ್ವವ್ಯಾಪಕತ್ವವನ್ನು ಸೂಚಿಸುವಂತಹ ಶ್ಲೋಕವೊಂದನ್ನು ರಚಿಸಿರುವುದಲ್ಲದೆ ಅರ್ಥವತ್ತಾದ ರೇಖಾಚಿತ್ರದ ಮೂಲಕವೂ ಅದನ್ನು ಚಿತ್ರಿಸಿದ್ದಾನೆ. ಆ ಶ್ಲೋಕ ಹೀಗಿದೆ:
"ಔಚಿತೀಮನುಧಾವಂತಿ ಸರ್ವೆ ಧ್ವನಿರಸೋನ್ನಯಾ: | ಗುಣಾಲಂಕೃತಿರೀತೀನಾಂ ನಯಾಶ್ಚಾನ್ಯಜುವಾಙ್ಮಯಂ |"
ಅಂದರೆ ಧ್ವನಿ, ರಸ, ಅನುಮಿತಿಗಳು ಮತ್ತು ಗುಣ ಅಲಂಕಾರ ರೀತಿಗಳೂ ಅವುಗಳನ್ನು ಒಳಗೊಂಡ ವಕ್ರೋಕ್ತಿ (ಅನ್ಯಜುವಾಙ್ಮಯಂ) ಇವೆಲ್ಲವೂ ಔಚಿತ್ಯದಲ್ಲಿ ಸಮಾವೇಶ ಗೊಳ್ಳುತ್ತವೆ. ಇದನ್ನು ರೇಖಾಚಿತ್ರದಲ್ಲಿ ಹೀಗೆ ತೋರಿಸಲಾಗಿದೆ.




1. ಗುಣ,
2. ಅಲಂಕಾರ,
3. ರೀತಿ - ಈ ಮೂರನ್ನೂ ಸ್ಪರ್ಶಿಸುವ ಒಳವೃತ್ತ ವಕ್ರೋಕ್ತಿ,
4. ಧ್ವನಿ,
5. ಅನುಮಿತಿ,
6. ರಸ - ಈ ಎಲ್ಲವನ್ನೂ ಆಧರಿಸಿರುವ ಹೊರವೃತ್ತ, ಔಚಿತ್ಯ,

ಎರಡು ತ್ರಿಕೋನ, ಎರಡು ವೃತ್ತಗಳನ್ನೊಳಗೊಂಡ ಈ ರೇಖಾಚಿತ್ರ ಎಲ್ಲ ಸಿದ್ಧಾಂತಗಳ ಸ್ಥಾನವನ್ನು ಅರ್ಥವತ್ತಾಗಿ ನಿರ್ದೇಶಿಸಿದೆ. ಚಿಕ್ಕವೃತ್ತದ ಒಳಗಿರುವ ಮೊದಲನೆಯ ತ್ರಿಕೋನ, ರೀತಿ, ಗುಣ, ಅಲಂಕಾರಗಳನ್ನು ಪ್ರತಿನಿಧಿಸಿದೆ. ಅದರಲ್ಲೂ ತುತ್ತತುದಿಯಲ್ಲಿ ರೀತಿ ಇರುವುದೂ ಸೂಕ್ತವಾಗಿದೆ. ಈ ಮೂರನ್ನು ಒಳಗೊಳ್ಳುವಷ್ಟು ವ್ಯಾಪಕವಾದುದು ವಕ್ರೋಕ್ತಿವೃತ್ತ. ಆ ವೃತ್ತದ ಮೂರು ಕಡೆಗಳನ್ನು ಸ್ಪರ್ಶಿಸುವ ಹೊರತ್ರಿಕೋನ, ರಸ, ಧ್ವನಿ, ಅನುಮಿತಿಗಳನ್ನು ಪ್ರತಿನಿಧಿಸುತ್ತದೆ. ರಸ ತುತ್ತತುದಿಯಲ್ಲಿರುವುದು ಸಹಜವಾಗಿದೆ. ಧ್ವನಿಯ ಜೊತೆಗೆ, ಅನುಮಿತಿಯನ್ನು ಸೇರಿಸುವುದು ಅಷ್ಟು ಸ್ಪಷ್ಟವಾಗಿಲ್ಲ. ಈ ಮೂರನ್ನು ಒಳಗೊಳ್ಳುವ ಹೊರವೃತ್ತವೇ ಔಚಿತ್ಯ. ಅದು ರೀತಿ, ಗುಣ, ಅಲಂಕಾರ, ವಕ್ರೋಕ್ತಿ, ಧ್ವನಿ, ರಸ, ಎಲ್ಲವನ್ನು ಒಳಗೊಳ್ಳುತ್ತದೆ. ಹೀಗೆ ಈ ರೇಖಾಚಿತ್ರ ಇಡೀ ಭಾರತೀಯ ಕಾವ್ಯಮೀಮಾಂಸೆಯ ಒಟ್ಟು ಚಿತ್ರವನ್ನು ಚಿತ್ರವತ್ತಾಗಿ ಕಣ್ಣಿಗೆ ಕಟ್ಟುತ್ತದೆ. ಔಚಿತ್ಯ ಸರ್ವಗ್ರಾಸಿಯಾಗಿರುವ ವ್ಯಾಪಕತತ್ವವೆಂಬುದನ್ನು ಸ್ಪಷ್ಟಪಡಿಸುತ್ತದೆ.

**ಮುಕ್ತಾಯ**

**ಔಚಿತ್ಯ ಪ್ರಸ್ಥಾನದ ಪ್ರಶ್ನೋತ್ತರಗಳು**

೧.ಔಚಿತ್ಯವು ಕಾವ್ಯಸೃಷ್ಟಿಯಲ್ಲಿ ಅತ್ಯಂತ ಅನಿವಾರ್ಯವಾದ ಮೂಲತತ್ತ್ವ ವೆಂಬುದನ್ನು ಅತ್ಯಂತ ಸಮರ್ಥವಾಗಿ ಪ್ರತಿಪಾದಿಸಿದವನು-ಅಭಿನವಗುಪ್ತ

೨.ಔಚಿತ್ಯವು ತನಗೆ ತಾನೇ ಸ್ವತಂತ್ರವಾಗಿ ನಿಲ್ಲುವ ಸ್ವಯಂಪೂರ್ಣ ಸ್ಥಾನವನ್ನು ಪಡೆಯಲಾರದೆಂಬುದನ್ನು ತೋರಿಸಿಕೊಟ್ಟವನು-ಅಭಿನವಗುಪ್ತ

೩. ಅಲಂಕಾರ ಗುಣ ರೀತಿ ಮೊದಲಾದುವುಗಳೆಲ್ಲಕ್ಕೂ ಕಾವ್ಯತ್ವದ ಸಿದ್ಧಿಯನ್ನು ತಂದು ಕೊಡುವ ಮೂಲ ಚೈತನ್ಯಾತ್ಮಕ ಶಕ್ತಿ -ಔಚಿತ್ಯ

೪.ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಸಿದ್ಧಾಂತಗಳ ಸಿದ್ಧಾಂತ ಎಂದೂ ಪರಿಗಣಿತವಾದ ತತ್ತ್ವ-ಔಚಿತ್ಯ

೪.ಔಚಿತ್ಯವನ್ನು ಸ್ವತಂತ್ರಸಿದ್ಧಾಂತವನ್ನಾಗಿ ಪ್ರತಿಪಾದಿಸಿದ ಏಕೈಕ ಆಲಂಕಾರಿಕ- ಕ್ಷೇಮೇಂದ್ರ.

೫.ಔಚಿತ್ಯವನ್ನೇ ಮೊಟ್ಟಮೊದಲನೆಯ ಬಾರಿಗೆ ಸ್ವತಂತ್ರವಾಗಿ ಪ್ರತಿಪಾದಿಸಿದ ಏಕೈಕ ಕೃತಿ.-ಕ್ಷೇಮೇಂದ್ರನ 'ಔಚಿತ್ಯವಿಚಾರ ಚರ್ಚಾ'

೬. ಪ್ರಾಯೋಗಿಕ ವಿಮರ್ಶೆಯ ದೃಷ್ಟಿಯನ್ನು ಒಳಗೊಂಡ ಭಾರತೀಯ ಕಾವ್ಯಮೀಮಾಂಸೆಯ ತತ್ವಗಳು- ಔಚಿತ್ಯ ಮತ್ತು ವಕ್ರೋಕ್ತಿ ಸಿದ್ಧಾಂತಗಳು.

೭. ಕ್ಷೇಮೆಂದ್ರನ ಕೃತಿಗಳು:-ಕವಿಕಂಠಾಭಾರಣ, ಕವಿಕರ್ಣಿಕಾ, ಸುವೃತ್ತತಿಲಕ, ಮತ್ತು ಔಚಿತ್ಯವಿಚಾರ ಚರ್ಚಾ-ಈ ಶಾಸ್ತ್ರಗಂಥಗಳನ್ನು ಬರೆದಿದ್ದಾನೆ.

'ಕವಿಕರ್ಣಿಕಾ ' ಗ್ರಂಥದಲ್ಲಿ ಬಹುಶಃ ರಸ, ಧ್ವನಿಗಳ ಪ್ರತಿಪಾದನೆ ಮಾಡಿದ್ದಿರಬಹುದೆಂದು. ತೋರುತ್ತದೆ. ಆದರೆ ಅದು ಸಿಕ್ಕಿಲ್ಲ. ಈಗ ಸಿಕ್ಕಿರುವ ಆತನ ಶಾಸ್ತ್ರಕೃತಿಗಳಲ್ಲಿ 'ಔಚಿತ್ಯವಿಚಾರ ಚರ್ಚಾ ಬಹಳ ಮಹತ್ವಪೂರ್ಣವಾದುದು.

೮.ಕ್ಷೇಮೆಂದ್ರನ ರಸ&ಔಚಿತ್ಯಗಳ ಸಂಬಂಧ ವಿಚಾರ:-

“ಔಚಿತ್ಯಸ್ಯ ಚಮತ್ಕಾರಕಾರಿಣಶ್ಚಾರುಚರ್ವಣೇ| ರಸಜೀವಿತಭೂತಸ್ಯ ವಿಚಾರಂ ಕುರುತೇsಧುನಾ// " (೩)

೯. ಸೌಂದರ್ಯದ ಆಸ್ವಾದನೆಯಲ್ಲಿ ಚಮತ್ಕಾರಕ್ಕೆ ಕಾರಣವೂ ರಸದ ಪ್ರಾಣಸ್ವರೂಪವೂ ಆದ ತತ್ತ್ವ-

ಔಚಿತ್ಯ

೧೦. 'ರಸಜೀವಿತಭೂತಸ್ಯ' ಎಂದು ಪ್ರಸಿದ್ಧಿಯಾದ ತತ್ತ್ವ-ಔಚಿತ್ಯ(ಕ್ಷೇ)

೧೧. ಕಾವ್ಯಕ್ಕೆ ರಸವೇ ಆತ್ಮ ರಸಕ್ಕೆ ಔಚಿತ್ಯವೇ ಪ್ರಾಣ ಎಂದವನು-ಕ್ಷೇಮೆಂದ್ರ

೧೨.ಔಚಿತ್ಯವತ್ ರಸಧ್ವನಿಃ ಎಂಬ ಹೇಳಿಕೆ ಕೊಟ್ಟವರು-ಅಭಿನವಗುಪ್ತ

೧೩.ಅದೇಶಜೋಹಿ ವೇಷಸ್ತು ನ ಶೋಭಾಂ ಜನಯಿಷ್ಯತಿ', 'ಮೇಖಲೋರಸಿ ಬಂಧೇಚ ಹಾಸ್ಯಾಟೈವೋಪಜಾಯತೇ' ಅಂದರೆ ಸೊಂಟದ ಆಭರಣವನ್ನು ಎದೆಯ ಮೇಲೆ ಧರಿಸಿದರೆ ಹಾಸ್ಯಾಸ್ಪದವಾಗುತ್ತದೆ-ಎಂಬ ಔಚಿತ್ಯದ ಕುರಿತ ಹೇಳಿಕೆಗಳನ್ನು ಕೊಟ್ಟವರು-ಭರತ

೧೪.ಪದೌಚಿತ್ಯ ಮತ್ತು ವಾಕ್ಯೌಚಿತ್ಯ ಗಳನ್ನು ಹೇಳಿದವರು-ಆನಂದವರ್ಧನ etc

೧೫. ಕ್ಷಮೇಂದ್ರ ಹೇಳಿದ ಔಚಿತ್ಯ ಗಳ ಸಂಖ್ಯೆ-೨೭

೧೬.ವರ್ಣಧ್ವನಿಯನ್ನು ಆನಂದವರ್ಧನ ಹೇಳಿದ್ದಾನೆ,ವರ್ಣೌಚಿತ್ಯವನ್ನು ಕ್ಷೇಮೇಂದ್ರ ಹೇಳಿಲ್ಲ.

೧೭.ಕ್ಷೇಮೇಂದ್ರ ಒಪ್ಪಿಕೊಂಡ ಆನಂದವರ್ಧನನ ವಿಚಾರಗಳು:- ಧ್ವನಿ- ರಸ, ಧ್ವನಿಯ ಮೂಲಕ ರಸೌಚಿತ್ಯ.

೧೮.ಔಚಿತ್ಯ ತತ್ತ್ವ ತುತ್ತತುದಿಯನ್ನು ಮುಟ್ಟಿದ್ದು ಯಾರಲ್ಲಿ? ಆನಂದವರ್ಧನ ಮತ್ತು ಅಭಿನವಗುಪ್ತರಲ್ಲಿ

೧೯. ಕಾವ್ಯತತ್ವವೀಕ್ಷಣೆಯ ಮುಕ್ಕಣ್ಣ ಎಂಬ ಖ್ಯಾತಿಯ ತತ್ತ್ವ-'ಔಚಿತ್ಯವದ್ರುರಸಧ್ವನಿಃ' ಎಂಬ ಅಭಿನವಗುಪ್ತನ ಮಾತು.

೨೦. ಔಚಿತ್ಯವನ್ನು ಸೂಚಿಸುವ ಭರತನ ಶ್ಲೋಕ-

ಆದೇಶ ಜೋ ಹೀ ವೇಷಸ್ತು ನ ಶೋಭಾಂ ಜನಯಿಷ್ಯತಿ | ಮೇಖಲೋರಸಿ ಬಂಧೇ ಚ ಹಾಸ್ಯಾಯೈವೋಪಜಾಯತೇ ||”(೨೩-೬೯)ಮೇಖಲೆಯನ್ನು ಎದೆಯ ಮೇಲೆ ಧರಿಸಿದರೆ, ಅದು ಹಾಸ್ಯಾಸ್ಪದವಾಗುತ್ತದೆ”. ತನ್ನ ಇನಿಯನಿಂದ ಆಗಲಿ, ವಿರಹದುಃಖದಿಂದ ಪರಿತಪಿಸುತ್ತಿರುವವಳನ್ನು ಸರ್ವಾಲಂಕಾರ ಭೂಷಿತಳನ್ನಾಗಿ ವರ್ಣಿಸುವುದು ಉಚಿತವಲ್ಲ.

೨೧.ಭರತನ ಪ್ರಕಾರ ಔಚಿತ್ಯದ ಮೂಲಸೂತ್ರ.

-ಒಡವೆಗಳನ್ನು ಆಯಾ ಸ್ಥಳಗಳಲ್ಲಿ ಹಾಕಿಕೊಳ್ಳುವಂತೆ, ವರ್ಣನೆಗಳನ್ನು ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ಅನುಗುಣವಾದಷ್ಟನ್ನು ಮಾತ್ರ ವರ್ಣಿಸಬೇಕೆಂಬುದನ್ನು ಶ್ಲೋಕದಲ್ಲಿ ಭರತ ಸೂಚಿಸಿದ್ದಾನೆ. ಇದೇ ಔಚಿತ್ಯದ ಮೂಲಸೂತ್ರ.

-ಔಚಿತ್ಯವನ್ನುವುದು ಕಾವ್ಯದ ವಿವಿಧ ಅಂಗಗಳಲ್ಲಿ ಕಂಡು ಬರುವ ಸಾಮರಸ್ಯ.

೨೨.ಔಚಿತ್ಯವನ್ನು ಸೂಚಿಸುವ ಭಾಮಹನ ಶ್ಲೋಕ-

ಸನ್ನಿವೇಶವಿಶೇಷಾತ್ತು ದುರುಕ್ತಮಪಿ ಶೋಭತೇ | ನೀಲಂ ಪಲಾಶಮಾಬದ್ಧ ಮಂತರಾಲೇ ಸ್ರಜಾಮಿವ | (ಕಾವ್ಯಾಲಂಕಾರ ೧. ೫೪)

-ಸನ್ನಿವೇಶವಿಶೇಷದಿಂದ ದುರುಕ್ತಿ ಅಂದರೆ ಕೆಟ್ಟ ಮಾತೂ ಶೋಭಿಸುತ್ತದೆ; ದೋಷವೂ ಗುಣವಾಗುತ್ತದೆ. ಹೇಗೆಂದರೆ ಹೂವಿನ ಹಾರದ ಮಧ್ಯೆ ಇರುವ ಸೊಪ್ಪಿಗೂ ಹೂವುಗಳಿಂದ ಬೆಲೆ ಬರುವಂತೆ.”

-ಕಣ್ಣಿನ ಸೌಂದರ್ಯವನ್ನು ಕಾಡಿಗೆ ಹೆಚ್ಚಿಸುವಂತೆ ಎಂದು ಹೇಳುತ್ತಾನೆ. ಇವುಗಳ ಹಿಂದಿರುವುದು ಔಚಿತ್ಯವೇ.

-'ಲೋಕವಿರೋಧ' ದೋಷಗಳನ್ನು ಪ್ರಸ್ತಾಪಿಸುವಾಗಲೂ ಈ ತತ್ತ್ವ ಕಂಡು ಬರುತ್ತದೆ. 'ಪ್ರಕೃತೌಚಿತ್ಯ'ವನ್ನುಮೀರುವುದೇ 'ಲೋಕವಿರೋಧಕ್ಕೆ' ಕಾರಣವಾಗುತ್ತದೆನ್ನುತ್ತಾನೆ.

೨೩.ಕಾವ್ಯದೋಷಗಳ ನಿರೂಪಣೆಯ ಸಂದರ್ಭದಲ್ಲಿಯೇ ಔಚಿತ್ಯದ ಪ್ರತಿಪಾದನೆ ಮಾಡಿದ ಅಲಂಕಾರಿಕರು

-ಭರತ,ಭಾಮಹ,ದಂಡಿ

೨೪.ಔಚಿತ್ಯವನ್ನು ಸೂಚಿಸುವ ದಂಡಿಯ ಶ್ಲೋಕ

-ವಿರೋಧಃ ಸಕಲೋಪೇಷ ಕದಾಚಿತ್ಕವಿಕೌಶಲಾತ್ | ಉತ್ಕ್ರಮ್ಯದೋಷಗಣನಾಂ ಗುಮವೀಥೀಂ ವಿಗಾಹ್ಯತೇ ||” (IV ೫-೭)

-ಕಾವ್ಯದಲ್ಲಿ ಗುಣದೋಷಗಳು ಕವಿಕೌಶಲ್ಯದಿಂದ ನಿರ್ಧಾರಿತವಾಗುತ್ತವೆ. ದೋಷಗಳು ನಿತ್ಯವಲ್ಲ, ಅನಿತ್ಯ.

-“ದೋಷಗಳೆಲ್ಲವೂ ಔಚಿತ್ಯದಿಂದ ಗುಣಗಳಾಗಿ ಪರಿಣಮಿಸಬಲ್ಲುವೆಂಬುದನ್ನು ಆತ ಕಂಡುಕೊಂಡಿದ್ದಾನೆ.

೨೫. ‘ಔಚಿತ್ಯ’ ಎನ್ನುವ ಈ ಮಾತು ಮೊಟ್ಟ ಮೊದಲು ಗೋಚರವಾಗುವುದು ಯಾರಲ್ಲಿ.

- ಭರ್ತೃಹರಿಯ 'ವಾಕ್ಯಪದೀಯ'ದಲ್ಲಿ (ಕ್ರಿ.ಶ. ೭ನೇ ಶ.) - ಒಂದು ಪದ್ಯಕ್ಕೆ ಹಲವಾರು ಅರ್ಥಗಳಿರುವಾಗ ಉದ್ದೇಶಿತ ಸಂದರ್ಭದಲ್ಲಿ ಯಾವ ಅರ್ಥವನ್ನು ಇಟ್ಟುಕೊಳ್ಳಬೇಕೆಂಬುದನ್ನು ಸೂಚಿಸುವುದಕ್ಕೆ 'ಔಚಿತ್ಯ' ಎಂಬ ಮಾತನ್ನು ಅಲ್ಲಿ ಬಳಸಲಾಗಿದೆ.

-ಅನಂತರ ಈ ಮಾತು ವ್ಯಾಕರಣದಿಂದ ಕಾವ್ಯಮೀಮಾಂಸೆಯ ವಲಯದೊಳಕ್ಕೆ ಬಂದಂತೆ ತೋರುತ್ತದೆ.

೨೬.ಔಚಿತ್ಯ ಪದ ಪ್ರಯೋಗ:-ಔಚಿತ್ಯದ ಹೆಸರು ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಮೊಟ್ಟಮೊದಲು ಸಿಕ್ಕುವುದು ಯಾರಲ್ಲಿ ?

-ಯಶೋವರ್ಮನ ರಾಮಾಭ್ಯುದಯ ನಾಟಕದಲ್ಲಿ. ಆ ಗ್ರಂಥ ಸಿಕ್ಕಿಲ್ಲ. ಆದರೆ

- ಭೋಜ ಆ ನಾಟಕದ ಪ್ರಸ್ತಾವನೆಯಲ್ಲಿ ಬಂದಿರಬಹುದಾದ ಒಂದು ಪದ್ಯವನ್ನು ಉದಾಹರಿಸಿದ್ದಾನೆ: (೮ನೇ ಶತಮಾನದ ಪೂರ್ವಾರ್ಧ)'

-"ಔಚಿತ್ಯಂ ವಚಸಾಂ ಪ್ರಕೃತ್ಯನುಗತಂ ಪಾತ್ರೋಚಿತಾ | ಪುಷ್ಟಿ: ಸ್ವಾವಸರೇ ರಸಸ್ಯ ಚ, ಕಥಾಮಾರ್ಗೆ ನ ಜಾತಿಕ್ರಮಃ ||"
ಎಂಬಲ್ಲಿ ಯಶೋವರ್ಮ ಈ ಪದವನ್ನು ಬಳಸಿದ್ದಾನೆ.
ಮಾತು, ಪಾತ್ರ, ರಸ ಮೊದಲಾದ ಎಲ್ಲ ಅಂಗಗಳಲ್ಲಿಯೂ ಔಚಿತ್ಯ'ವಿರಬೇಕೆನ್ನುತ್ತಾನೆ.
-ಇವನು ಹೇಳಿದ 'ಪಾತ್ರೌಚಿತ್ಯಂ' ಮತ್ತು 'ಪುಷ್ಟಿಃ ಪ್ರಾವಸರೇ ರಸಸ್ಯ' ಈ ಮಾತುಗಳನ್ನು ರುದ್ರಟ, ಆನಂದವರ್ಧನರು ಬೆಳಸಿದ್ದಾರೆ.

**೧೭.ರಸೌಚಿತ್ಯವನ್ನು ಹೇಳಿದವನು**
**-ಲೊಲ್ಲಟ**
**೧೮.ಔಚಿತ್ಯದ ಬೆಳವಣಿಗೆಯ ಮೂರು ಘಟ್ಟಗಳು.**

1. ಯಶೋವರ್ಮನವರೆಗಿನ ಬೆಳವಣಿಗೆ
2. Iಯಶೋವರ್ಮ 'ಔಚಿತ್ಯ' ಎನ್ನುವ ಮಾತನ್ನು 'ರಾಮಾಭ್ಯುದಯ'ದಲ್ಲಿ ಬಳಸಿದುದು.
3. ರುದ್ರಟ ಅದನ್ನು ತನ್ನ ಅಲಂಕಾರಗ್ರಂಥದಲ್ಲಿ ಮೊಟ್ಟಮೊದಲು ಸೇರಿಸಿ ವಿವೇಚಿಸಿದುದು ಅನಂತರ ಆನಂದವರ್ಧನ ಅದನ್ನು ವಿಸ್ತಾರವಾಗಿ ಪ್ರತಿಪಾದಿಸಿದುದು, ಮತ್ತು ಅದರಿಂದ ಕ್ಷೇಮೇಂದ್ರನ ಸಿದ್ಧಾಂತಕ್ಕೆ ದಾರಿಮಾಡಿಕೊಟ್ಟುದು,

೨೯.ಔಚಿತ್ಯವನ್ನು ಸೂಚಿಸುವ ರುದ್ರಟನ ಶ್ಲೋಕ-
-"ಗ್ರಾಮ್ಯತ್ವಮನೌಚಿತ್ಯಂ
ವ್ಯವಹಾರಾಕಾರವೇಷವಚನಾನಾಮ್ 1 ದೇಶ ಕುಲ ಜಾತಿ ವಿದ್ಯಾವಿತ್ಯವಯಸ್ಥಾನ ಪಾತ್ರೇಷು |"
-ವ್ಯವಹಾರ, ಆಕಾರ, ವೇಷ, ವಚನ, ದೇಶಕುಲಾದಿಗಳಲ್ಲಿ ಅನೌಚಿತ್ಯ ಇರಬಾರದೆನ್ನುತ್ತಾನೆ. ಔಚಿತ್ಯವರಿತು ಬಂದಾಗ ಈ ದೋಷಗಳೆಲ್ಲಾ ಗುಣಗಳಾಗುತ್ತವೆಂಬುದನ್ನು ಗುರುತಿಸಿದ್ದಾನೆ.
-'.ಅಲಂಕಾರೌಚಿತ್ಯ:-ಯಮಕ' ಮೊದಲಾದ ಶಬ್ದಾಲಂಕಾರಗಳನ್ನು ವಿವರಿಸುತ್ತಾ ಇವುಗಳ ಪ್ರಯೋಗದಲ್ಲಿ 'ಔಚಿತ್ಯ' ಇರಬೇಕೆನ್ನುತ್ತಾನೆ ಈತ ಅನುಪ್ರಾಸಗಳನ್ನು ಮುಖ್ಯ ವಿಷಯಕ್ಕೆ ಸಂಬಂಧಿಸಿ ಅದಕ್ಕೆ ಸಹಾಯಕವಾಗುವಂತೆಮಾತ್ರ ಬಳಸಬೇಕು. ಇದು "ಅಲಂಕಾರೌಚಿತ್ಯ", ಹಾಗೇ ಕಾವ್ಯದೋಷಗಳನ್ನು ಹೇಳುವಾಗ,
-'ಆಗ್ರಾಮ್ಯ' ಮೊದಲಾದ ದೋಷಗಳು ಔಚಿತ್ಯವರಿತು ಬಂದರೆ ಗುಣಗಳೇ ಆಗುತ್ತವೆನ್ನುತ್ತಾನೆ.

೩೦.ಮಹಾಮಹೋಪಾಧ್ಯಾಯ ಪ್ರೊಫೆಸರ್ ಎಸ್. ಕುಪ್ಪುಸ್ವಾಮಿ ಶಾಸ್ತ್ರಿಯಾರ್ ಅವರ ಔಚಿತ್ಯದ ಕುರಿತ ಪ್ರಸಿದ್ಧ ವಿಚಾರಗಳು
-ಅವರು ಭಾರತೀಯ ಕಾವ್ಯಮೀಮಾಂಸೆಯ ಎಲ್ಲ ಸಿದ್ಧಾಂತಗಳನ್ನು ಒಳಗೊಂಡು, ಔಚಿತ್ಯದ ಸರ್ವವ್ಯಾಪಕತ್ವವನ್ನು ಸೂಚಿಸುವಂತಹ ಶ್ಲೋಕವೊಂದನ್ನು ರಚಿಸಿರುವರು.
- ಅರ್ಥವತ್ತಾದ ರೇಖಾಚಿತ್ರದ ಮೂಲಕವೂ ಅದನ್ನು ಚಿತ್ರಿಸಿದ್ದಾರೆ.
-ಆ ಶ್ಲೋಕ ಹೀಗಿದೆ:
"ಔಚಿತೀಮನುಧಾವಂತಿ ಸರ್ವೆ ಧ್ವನಿರಸೋನ್ನಯಾ: | ಗುಣಾಲಂಕೃತಿರೀತೀನಾಂ ನಯಾಶ್ಚಾನೃಜುವಾಙ್ಮಯಂ |"
ಅಂದರೆ ಧ್ವನಿ, ರಸ, ಅನುಮಿತಿಗಳು ಮತ್ತು ಗುಣ ಅಲಂಕಾರ ರೀತಿಗಳೂ ಅವುಗಳನ್ನು ಒಳಗೊಂಡ ವಕ್ರೋಕ್ತಿ (ಅನೃಜುವಾಙ್ಮಯಂ) ಇವೆಲ್ಲವೂ ಔಚಿತ್ಯದಲ್ಲಿ ಸಮಾವೇಶ ಗೊಳ್ಳುತ್ತವೆ. ಇದನ್ನು ರೇಖಾಚಿತ್ರದಲ್ಲಿ ಹೀಗೆ ತೋರಿಸಲಾಗಿದೆ.
೩೧.ಔಚಿತ್ಯದ ಕುರಿತ ಕ್ಷೇಮೇಂದ್ರನ ವಿಚಾರಗಳು
-"ಉಚಿತಂ ಪ್ರಾಹುರಾಚಾರ್ಯ: ಸದೃಶಂ ಕಿಲ ಯಸ್ಯ ಯತ್ | ಉಚಿತಸ್ಯ ಚ ಯೋ ಭಾವಸ್ತದೌಚಿತ್ಯಂ ಪ್ರಚಕ್ಷತೇ || (೭)
ಯಾವುದು ಯಾವುದಕ್ಕೆ ಯುಕ್ತವಾಗಿರುವುದೋ ಅದನ್ನೇ ವಿದ್ವಾಂಸರು 'ಉಚಿತ' ಎಂದು ಕರೆಯುತ್ತಾರೆ. 'ಉಚಿತ'ದ ಆ ಭಾವವೇ 'ಔಚಿತ್ಯ' ಎನಿಸಿಕೊಳ್ಳುತ್ತದೆ.

೩೨. ಕ್ಷೇಮೇಂದ್ರನು ಹೇಳಿದ ಔಚಿತ್ಯದ 27 ವಿಧಗಳು
"ಪದ, ವಾಕ್ಯ, ಪ್ರಬಂಧಾರ್ಥ, ಗುಣ, ಅಲಂಕಾರ, ರಸ, ಕ್ರಿಯಾಪದ, ಕಾರಕ, ಲಿಂಗ, ವಚನ, ವಿಶೇಷಣ, ಉಪಸರ್ಗ, ನಿಪಾತ, ಕಾಲ, ದೇಶ, ಕುಲ, ವ್ರತ, ತತ್ತ್ವ, ಸತ್ತ್ವ, ಅಭಿಪ್ರಾಯ, ಸ್ವಭಾವ, ಸಾರಸಂಗ್ರಹ, ಪ್ರತಿಭೆ, ಅವಸ್ಥೆ, ವಿಚಾರ, ಹೆಸರು, ಆಶಂಸನೆ-ಹೀಗೆ ಈ ಎಲ್ಲಾ ಕಾವ್ಯಾಂಗಗಳಲ್ಲಿಯೂ ವ್ಯಾಪಿಸಿರುವ ಔಚಿತ್ಯವೇ ಕಾವ್ಯದ ಜೀವಿತ.

೩೩."ಪದ, ವಾಕ್ಯ, ಪ್ರಬಂಧಾರ್ಥ, ಗುಣ, ಅಲಂಕಾರ, ರಸ, ಕ್ರಿಯಾಪದ, ಕಾರಕ, ಲಿಂಗ, ವಚನ, ವಿಶೇಷಣ, ಉಪಸರ್ಗ, ನಿಪಾತ, ಕಾಲ, ದೇಶ, ಕುಲ, ವ್ರತ, ತತ್ತ್ವ, ಸತ್ತ್ವ, ಅಭಿಪ್ರಾಯ, ಸ್ವಭಾವ, ಸಾರಸಂಗ್ರಹ, ಪ್ರತಿಭೆ, ಅವಸ್ಥೆ, ವಿಚಾರ, ಹೆಸರು, ಆಶಂಸನೆ-ಹೀಗೆ ಈ ಎಲ್ಲಾ ಕಾವ್ಯಾಂಗಗಳಲ್ಲಿಯೂ ವ್ಯಾಪಿಸಿರುವ ಔಚಿತ್ಯವೇ ಕಾವ್ಯದ ಜೀವಿತ.

೩೪.ಕ್ಷೇಮೇಂದ್ರನ ಪ್ರಕಾರ ಪದೌಚಿತ್ಯ:- "ತಿಲಕಂ ಬಿಭ್ರತೀ ಸೂಕ್ತಿ ರ್ಭಾತ್ಯೇಕಮುಚಿತಂ ಪದಮ್ | ಚಂದ್ರಾನನೇವ ಕಸ್ತೂರೀಕೃತಂ ಶ್ಯಾಮೇವ ಚಂದನಮ್ || (೧೧)
ಅಂದರೆ "ತಿಲಕದಂತಿರುವ ಒಂದೇ ಉಚಿತವಾದ ಪದವನ್ನೊಳಗೊಂಡ ಸೂಕ್ತಿಯು ಕೂಡ ಕಸ್ತೂರಿಯ ತಿಲಕವನ್ನಿಟ್ಟುಕೊಂಡ ಚಂದ್ರಾನನೆಯಂತೆಯೂ, ಶ್ರೀಗಂಧದ ತಿಲಕವನ್ನಿಟ್ಟು, ಕೊಂಡ ಶ್ಯಾಮಲ ಯುವತಿಯಂತೆಯೂ ಶೋಭಿಸುತ್ತದೆ"

೩೫.ಆನಂದವರ್ಧನ ಪ್ರಕಾರ ಪದಧ್ವನಿ:- 'ವಿಚ್ಛಿತ್ತಿ ಶೋಭಿನೈಕೇನ ಭೂಷಣೇನೇವ ಭಾಮಿನಿ' ಎಂದು ಮುಂತಾಗಿ ಆತ ಹೇಳಿದ್ದಾನೆ
-'ರಮಣೀಯವಾಗಿ ಶೋಭಿಸುವ ಒಂದೇ ಆಭರಣದಿಂದ ಕಾಮಿನಿ ಹೇಗೆ ಕಳೆಗೂಡುವಳೋ ಹಾಗೆ ಒಂದು ಪದವು ಹೊಳೆಯಿಸುವ ಧ್ವನಿಯಿಂದಲೇ ಸುಕವಿಯ ವಾಣಿ ಕಳೆಗೂಡುತ್ತದೆ' ಎನ್ನುತ್ತಾನೆ
- ಹೀಗೆ ಧ್ವನಿಯನ್ನು ಹೊಳೆಯಿಸಿ ತೋರುವಂತಹ ಪ್ರದಪ್ರಯೋಗವೇ ಪದೌಚಿತ್ಯ.

೩೬.ಕ್ಷೇಮೇಂದ್ರನ ಪ್ರಕಾರ ವಾಕ್ಯೌಚಿತ್ಯ:- ವಾಕ್ಯದಲ್ಲಿ ಬರುವ ಅರ್ಥ, ಸನ್ನಿವೇಶಕಕ್ಕನುಗುಣವಾಗಿದ್ದು ಕಾವ್ಯವಿವೇಚನಾವಿಚಕ್ಷಣರಿಗೆ ಪ್ರಿಯವಾಗು ವಂತಿರಬೇಕು.
ಔಚಿತ್ಯರಚಿತಂ ವಾಕ್ಯಂ ಸತತಂ ಸಂಮತಂ ಸತಾಮ್ | ತ್ಯಾಗೋದಗ್ರಮಿವೈಶ್ವರ್ಯಂ ಶೀಲೋಜ್ಜ್ವಲಮಿವ ಶ್ರುತಮ್ || (೧೨)
ಎಂದು ಇದನ್ನು ಹೇಳಿದ್ದಾನೆ. ಔಚಿತ್ಯಪೂರ್ಣವಾದ ವಾಕ್ಯ ಸಹೃದಯರಿಗೆ ಯಾವಾಗಲೂ ಮೆಚ್ಚುಗೆಯಾಗುತ್ತದೆ. ಅದು ಹೇಗೆಂಬುದನ್ನು ಎರಡು ಸಾದೃಶ್ಯಗಳಿಂದ ಹೇಳುತ್ತಾನೆ- ತ್ಯಾಗದಿಂದ ಶೋಭಿಸುವ ಐಶ್ವರದಂತೆ, ಶೀಲದಿಂದ ಬೆಳಗುವ ವಿದ್ಯೆಯಂತೆ ಎಂಬುದಾಗಿ. ಇದಕ್ಕೆ ಕ್ಷೇಮೇಂದ್ರ ತನ್ನದೇ ಆದ ಕಾವ್ಯ 'ವಿನಯವಲ್ಲಿ'ಯಿಂದ ಒಂದು ಉದಾಹರಣೆ ಕೊಡುತ್ತಾನೆ:

೩೭.ಕ್ಷೇಮೇಂದ್ರನ ಪ್ರಕಾರ ಪ್ರಬಂಧೌಚಿತ್ಯ:-ಬಹುಶಃ ಆನಂದವರ್ಧನ ಹೇಳಿದ 'ಪ್ರಬಂಧಧ್ವನಿ'ಯಿಂದ ಇದು ಪ್ರೇರಿತವಾಗಿದ್ದರೂ ಇದಕ್ಕೆ ಕ್ಷೇಮೇಂದ್ರ ಕೊಡುವ ಉದಾಹರಣೆ ಮತ್ತು ವಿವರಣೆಗಳು ಅದರಷ್ಟು ವ್ಯಾಪಕವಾಗಿರುವಂತೆ ತೋರುವುದಿಲ್ಲ. 'ಉಚಿತಾರ್ಥವಿಶೇಷೇಣ ಪ್ರಬಂಧಾರ್ಥ: ಪ್ರಕಾಶ್ಯತೇ'.

ಇಡೀ ಪ್ರಬಂಧವನ್ನೇ ವ್ಯಾಪಿಸಿರುವ ಧ್ವನಿ' ಎನ್ನುವಷ್ಟು ವ್ಯಾಪಕವಾದ ರೀತಿಯಲ್ಲಿ 'ಪ್ರಬಂಧಧ್ವನಿ' ಬೆಳೆದರೆ 'ಪ್ರಬಂಧೌಚಿತ್ಯ' ಇಡೀ ಪ್ರಬಂಧದ ಸ್ವಾರಸ್ಯಕ್ಕೆ ಕಾರಣವಾಗುವ ಒಂದು ವಿಶಿಷ್ಟ ವರ್ಣನೆಗೆ ಅನ್ವಯಿಸುತ್ತದೆ.

೩೮.ಕ್ಷೇಮೇಂದ್ರನ ಕಾವ್ಯ-ವಿನಯವಲ್ಲಿ
೩೯.ಕ್ಷೇಮೇಂದ್ರನ ಪ್ರಕಾರ ಗುಣೌಚಿತ್ಯ:- "ಪ್ರಸ್ತುತಾರ್ಥೋಚಿತಃ ಕಾವ್ಯೇ ಭವ್ಯಃ ಸೌಭಾಗ್ಯವಾನ್ ಗುಣಃ".ಪ್ರಸ್ತುತವಾದ ಅರ್ಥಕ್ಕೆ ಉಚಿತವಾದ ಗುಣ ಮಾತ್ರ ಭವ್ಯ ಮತ್ತು ಸುಂದರ ಎನಿಸಿಕೊಳ್ಳುತ್ತದೆ.
ಉದಾ:-ಗದಾಯುದ್ಧ ಗುಣೌಚಿತ್ಯದ ಗಣಿ. 'ಕುರುಭೂಭೃತ್ ಬಲಕಾಲತೂಲ ಪವನಂ ಕೌರವ್ಯ ಗಂಧೇಭಕೇಸರಿ, ದುಶ್ಯಾಸನ ರಕ್ತರಕ್ತವದನಂ' ಎಂದು ಒಂದು ಕಡೆ ರನ್ನನ ಶೈಲಿ ಭೋರ್ಗರೆದರೆ, ಇನ್ನೊಂದು ಕಡೆ 'ನೀನುಳ್ಳೊಡುಂಟು ರಾಜ್ಯಂ, ನೀನುಳ್ಳೊಡೆ ಪಟ್ಟಮುಂಟು, ಬೆಳ್ಗೊಡೆಯುಂಟೈ". ಎಂದು ಮುಂತಾಗಿ ಕರುಣೆಯಿಂದ ಹೃದಯವನ್ನು ಮಿಡಿಯುತ್ತದೆ.

೪೦.ಕ್ಷೇಮೇಂದ್ರನ ಪ್ರಕಾರ ಅಲಂಕಾರೌಚಿತ್ಯ:-ಅರ್ಥೌಚಿತ್ಯವತಾ ಸೂಕ್ತಿರಲಂಕಾರೇಣ ಶೋಭತೇ'- ಎನ್ನುತ್ತಾನೆ ಕ್ಷೇಮೇಂದ್ರ. ಅಂದರೆ ಪ್ರಸ್ತುತವಾದ ಅರ್ಥಕ್ಕೆ ಉಚಿತವಾದ ರೀತಿಯಲ್ಲಿ ಮಾತ್ರ ಅಲಂಕಾರಗಳು ಬರಬೇಕು.ರಸನಿಯಂತ್ರಿತ'ವಾದುವುಗಳು, ರಸಾಕ್ಷಿಪ್ತವಾಗಿ' ರೂಪಗೊಳ್ಳಬೇಕಾದುವುಗಳು."ಇದು ಪಾತಾಳ ಬಿಲಕ್ಕೆ ಬಾಗಿಲ್, ಇದು ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ...' 'ರಸೆಯಿಂ ಕಾಲಾಗ್ನಿರುದ್ರಂ ಪೊರಮಡುವವೊಲ್' 'ರುದ್ರಾಟ್ಟಹಾಸಂ ಜಲಮಾದತ್ತು....' 'ಶಂಖದಿಂ ಕಡೆದರೋ' 'ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ....' 'ವಡಬಾಗ್ನಿ ಜಡೆವೊತ್ತುದೋ ಸಿಡಿಲು ಹೊಸ ಭಸಿತವಿಡಕಲಿತುದೋ'-ಈ ಮೊದಲಾದ ಅಲಂಕಾರಗಳ ಔಚಿತ್ಯವನ್ನು ಅದರಿಂದ ಸಾಧಿಸಿರುವ ಧ್ವನಿಪರಂಪರೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು".

೪೧.ಕ್ಷೇಮೇಂದ್ರನ ಪ್ರಕಾರ ರಸೌಚಿತ್ಯ':- ವಸಂತಮಾಸ ಅಶೋಕಲತೆಯನ್ನು ಚಿಗುರಿಸುವಂತೆ ಔಚಿತ್ಯರುಚಿರವಾದ ರಸವು ಎಲ್ಲ ಹೃದಯಗಳನ್ನೂ ವ್ಯಾಪಿಸಿ ಮನಸ್ಸನ್ನು ಚಿಗುರಿಸುತ್ತದೆ ಎಂದು ಹೇಳಿ ಶೃಂಗಾರ, ಹಾಸ್ಯ, ಕರುಣ ಮೊದಲಾದ ಎಲ್ಲ ರಸಗಳಿಗೂ ಉದಾಹರಣೆಗಳನ್ನು ಕೊಡುತ್ತಾನೆ.

೪೨.ಪ್ರೊಫೆಸರ್ ಎಸ್. ಕುಪ್ಪುಸ್ವಾಮಿ ಶಾಸ್ತ್ರಿಯಾರ್ ಅವರು ಭಾರತೀಯ ಕಾವ್ಯಮೀಮಾಂಸೆಯ ಎಲ್ಲ ಸಿದ್ಧಾಂತಗಳನ್ನು ಒಳಗೊಂಡು, ಔಚಿತ್ಯದ ಸರ್ವವ್ಯಾಪಕತ್ವವನ್ನು ಸೂಚಿಸುವಂತಹ ಶ್ಲೋಕ,"ಔಚಿತೀಮನುಧಾವಂತಿ ಸರ್ವೆ ಧ್ವನಿರಸೋನ್ನಯಾ: | ಗುಣಾಲಂಕೃತಿರೀತೀನಾಂ ನಯಾಶ್ಚಾನೃಜುವಾಙ್ಮಯಂ |"

ಅಂದರೆ ಧ್ವನಿ, ರಸ, ಅನುಮಿತಿಗಳು ಮತ್ತು ಗುಣ ಅಲಂಕಾರ ರೀತಿಗಳೂ ಅವುಗಳನ್ನು ಒಳಗೊಂಡ ವಕ್ರೋಕ್ತಿ (ಅನೃಜುವಾಙ್ಮಯಂ) ಇವೆಲ್ಲವೂ ಔಚಿತ್ಯದಲ್ಲಿ ಸಮಾವೇಶ ಗೊಳ್ಳುತ್ತವೆ.

೪೩.ಕುಂತಕನ ಪ್ರಕಾರ ಎಲ್ಲ ಮಾರ್ಗಗಳಿಗೂ ಏಕಪ್ರಕಾರವಾಗಿ ಅನ್ವಯಿಸುವ ಎರಡು ಗುಣಗಳು.
- ಒಂದು ಔಚಿತ್ಯ, ಇನ್ನೊಂದು ಸೌಭಾಗ್ಯ, ಈ ಎರಡು ಗುಣಗಳನ್ನು 'ಸಾಧಾರಣಗುಣ'(ಎಂದರೆ ಎಲ್ಲ ಮಾರ್ಗಗಳಲ್ಲಿಯೂ ಇರಲೇಬೇಕಾದ ಏಕಪ್ರಕಾರವಾದ ಗುಣ)ಗಳೆಂದು ಕರೆಯುತ್ತಾನೆ.
-ವಿಶಿಷ್ಟ ಅಥವಾ 'ಅಸಾಧಾರಣಗುಣ'ಗಳು ಮೂರು ಮಾರ್ಗಗಳ ಸ್ವರೂಪವನ್ನು ನಿರ್ಣಯಿಸುವಂತಹವುಗಳು. ಆದರೆ ಔಚಿತ್ಯ ಸೌಭಾಗ್ಯಗಳು ಮೂರೂ ಮಾರ್ಗಗಳಲ್ಲಿಯೂ ಏಕರೂಪವಾಗಿ ಇರಲೇ ಬೇಕಾದ ಅನಿವಾರ್ಯವಾದ ಗುಣಗಳು.

೪೪.ಕುಂತಕನ ಪ್ರಕಾರ ಔಚಿತ್ಯ'ದಲ್ಲಿಯ ಎರಡು ಬಗೆಗಳು
- 'ಉಚಿತಾಖ್ಯಾನ' ಮತ್ತು 'ವಾಚ್ಯಂ ಶೋಭಾತಿಶಾಯಿನಾ' ಎಂಬ ಎರಡು ಬಗೆಗಳನ್ನು ಗುರುತಿಸಿದ್ದಾನೆ. ಇವು ಅಭಿವ್ಯಕ್ತಿಯ ಶಕ್ತಿಯನ್ನು ಉದ್ದೀಪನ ಗೊಳಿಸುತ್ತವೆ.

೪೫.ಕುಂತಕನ ಪ್ರಕಾರ ಶಬ್ದಾರ್ಥಪಾರಮಾರ್ಥ್ಯ':-ಕಾವ್ಯದಲ್ಲಿ ಶಬ್ದ ಮತ್ತು ಅರ್ಥಗಳ ಮಹತ್ವವನ್ನು ವಿವರಿಸುತ್ತಾ ಇವೆರಡರ 'ಪಾರಮಾರ್ಥ್ಯವನ್ನು ಗಮನಿಸುತ್ತಾನೆ.
ಶಬ್ದಾರ್ಥಪಾರಮಾರ್ಥ್ಯ' ಎಂದು ಕರೆಯುತ್ತಾನೆ. ಇದರಲ್ಲಿ 'ಅರ್ಥಪಾರಮಾರ್ಥ್ಯ'ವೇ 'ಅರ್ಥೌಚಿತ್ಯ' ಎಂಬುದು ಸ್ಪಷ್ಟವಾಗುತ್ತದೆ.

೪೬.ಕುಂತಕನ ಪ್ರಕಾರ ವರ್ಣೌ ಚಿತ್ಯ.-
ಅಕ್ಷರವಿನ್ಯಾಸವೂ ರಸಗಳಿಗೆ ಉಚಿತ ವಾಗಿರುವಂತೆ ಅಭಿವ್ಯಕ್ತಗೊಳ್ಳಬೇಕೆಂಬುದನ್ನು ಸೂಚಿಸುತ್ತಾ ಅದನ್ನು 'ವರ್ಣವಕ್ರತೆ' ಎಂದು ಕರೆಯುತ್ತಾನೆ. ಈ ವರ್ಣವಕ್ರತೆಯನ್ನು ಸಾಧಿಸುವುದು ವರ್ಣೌ ಚಿತ್ಯ.
-ಶಬ್ದಾಲಂಕಾರಗಳಾದ ಪ್ರಾಸ ಅನುಪ್ರಾಸಾದಿಗಳಲ್ಲಿಯೂ ಇದು ವ್ಯಕ್ತವಾಗುತ್ತದೆ.

೪೭.ಕುಂತಕನ ಪ್ರಕಾರ ಅಲಂಕಾರೌಚಿತ್ಯದ ಮೂಲ ತತ್ವ:- ಅಲಂಕಾರಗಳು ಸಹಜವಾಗಿ ತಮಗೆ ತಾವೇ ಆವಿರ್ಭವಿಸಬೇಕು. ಮತ್ತು ಸುಲಭಗ್ರಾಹ್ಯವಾಗಿ ರಸಾನುಭವಕ್ಕೆ ಕಾರಣವಾಗುವಂತಿರಬೇಕು ಎಂಬುದು. ಈ ಸಂದರ್ಭ ದಲ್ಲಿ ಆತ ಹೇಳುವ:

"ನಾತಿನಿರ್ಬಂಧವಿಹಿತಾ ನಾಪ್ಯಪೇಶಲಭೂಷಿತಾ | ಪೂರ್ವಾವೃತ್ತ ಪರಿತ್ಯಾಗ ನೂತನಾವರ್ತನೋಜ್ಜ್ವಲಂ ||"

ಎಂಬ ಮಾತನ್ನು ನೋಡಬಹುದು. ಇಲ್ಲಿ ಕುಂತಕ, ಆನಂದವರ್ಧನ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಸಂವಾದಿಯಾಗಿರುವುದು ಕಾಣುತ್ತದೆ.

೪೮.ಭೋಜ ('ಶೃಂಗಾರಪ್ರಕಾಶ')ನ ಪ್ರಕಾರ ಔಚಿತ್ಯ

-ಔಚಿತ್ಯವು ರಸಪರ್ಯವಸಾಯಿ

**ಔಚಿತ್ಯವಿರುದ್ಧ':-** 'ಪಾಮರ'ನೊಬ್ಬನು ಅತಿ ಅಲಂಕೃತವಾದ ಉಡುಗೆಗಳನ್ನು ಧರಿಸುವುದು. ಅಲಂಕಾರಗಳ ನಿರೂಪಣೆಯ ಸಂದರ್ಭದಲ್ಲಿಯೂ ಔಚಿತ್ಯದ ಪ್ರಸ್ತಾಪ ಬರುತ್ತದೆ. ಹಾಗೆಯೇ

**ಛಂದೋ ಔಚಿತ್ಯ**:- ಛಂದಸ್ಸಿನಲ್ಲಿಯೂ ಔಚಿತ್ಯವಿರಬೇಕೆಂಬುದನ್ನು ಭೋಜ ಗುರುತಿಸಿದ್ದಾನೆ. ಭಾವಕ್ಕನುಗುಣವಾಗಿ ಛಂದಸ್ಸು ಮೂಡಿಬರಬೇಕೆನ್ನುತ್ತಾನೆ.

'ಅರ್ಥಾನುರೂಪಚ್ಛಂದಂ' ಎನ್ನುವ ಮಾತು ಅದನ್ನು ಸೂಚಿಸುತ್ತದೆ. ಈ ಎಲ್ಲ ಔಚಿತ್ಯಗಳನ್ನು ರಸಕ್ಕೆ ಅನ್ವಯಿಸಿ ವಿವೇಚಿಸುವುದನ್ನು ಆತ ಮರೆಯುವುದಿಲ್ಲ.
'ಅನೌಚಿತ್ಯಪರಿಹಾರ' ಎಂದು ಅದನ್ನು ಕರೆಯುತ್ತಾನೆ.

೪೯.ಅಭಿನವಗುಪ್ತನ ವ್ಯಾಖ್ಯಾನದಂತೆ ಔಚಿತ್ಯ:- ರಸ, ಧ್ವನಿಗಳಿಂದ ಔಚಿತ್ಯ' ಸಹಜವಾಗಿಯೇ ಹೊರಹೊಮ್ಮುತ್ತದೆನ್ನುವುದನ್ನೂ ಮತ್ತು ಈ ಮೂರೂ ಬೇರ್ಪಡಿಸಲಾಗದ ತ್ರಿತ್ವಮುಖಿ, ತತ್ವಗಳೆಂಬುದನ್ನೂ ಈತ ಸ್ಪಷ್ಟಪಡಿಸಿದ:
-'ಉಚಿತ ಶಬ್ದೇನ ರಸವಿಷಯಮೌಚಿತ್ಯ: ಭವತೀತಿ ದರ್ಶಯನ್ ರಸಧ್ವನೇಃ ಜೀವಿತತ್ತ್ವಂ ಸೂಚಯತಿ' ಎನ್ನುವ ಈತನ ಮಾತು ಈ ನಿಲವನ್ನು ನಿರೂಪಿಸುತ್ತಿದೆ.

೫೦.ಅಭಿನವಗುಪ್ತನ ವ್ಯಾಖ್ಯಾನದಂತೆ ಅಲಂಕಾರೌಚಿತ್ಯ:-
ಅಲಂಕಾರೌಚಿತ್ಯದ ಬಗೆಗೆ ಹೇಳುತ್ತಾ 'ಅಲಂಕಾರ್ಯ' ಇದ್ದರೆ ಮಾತ್ರ ಅದು 'ಅಲಂಕಾರ' ಎನ್ನುವ ಹೆಸರಿಗೆ ಯೋಗ್ಯವಾಗುತ್ತದೆನ್ನುತ್ತಾನೆ. ಇಲ್ಲವಾದರೆ ಅಲಂಕಾರಗಳೆಲ್ಲಾ ಹೆಣಕ್ಕೆ ಮಾಡಿದ ಶೃಂಗಾರದಂತೆ.

ಜೀವಂತ ದೇಹಕ್ಕೆ ಮಾಡುವ ಶೃಂಗಾರದಲ್ಲಿಯೂ ಔಚಿತ್ಯ ಬೇಕು. ವಿರಾಗಿಣಿಗೆ ಅಲಂಕಾರಗಳನ್ನು ತೊಡಿಸಿದರೆ ಅದು ಅನೌಚಿತ್ಯವಾಗುತ್ತದೆ. ಹಾಗೆಯೇ ಅನಗತ್ಯವಾದ ಕಡೆಗಳಲ್ಲಿ ಅಲಂಕಾರಗಳು ಬಂದರೆ ಅದು ಅಲಂಕಾರೌಚಿತ್ಯವನ್ನು ಮೀರಿದಂತಾಗುತ್ತದೆ.

೫೧. ಅಭಿನವಗುಪ್ತನ ವ್ಯಾಖ್ಯಾನದಂತೆರಸೌಚಿತ್ಯ
ವಿಭಾವಾನುಭಾವಾದಿಗಳಲ್ಲಿ ಔಚಿತ್ಯ ವಿದ್ದರೆ ರಸಪ್ರತೀತಿಗೆ ಕಾರಣವಾಗುತ್ತದೆಂಬುದನ್ನು ವಿವರಿಸಿ ಅದನ್ನು ರಸೌಚಿತ್ಯವೆಂದು ಕರೆದಿದ್ದಾನೆ.

ರಸಕ್ಕಾಗಿ ಔಚಿತ್ಯವೇ ಹೊರತು ಅದು ತನಗೆ ತಾನೇ ಇಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳುತ್ತಾನೆ. ಇತರ ಮೂಲಪರಿಕರಗಳ ಸಾಮರಸ್ಯವೇ ಔಚಿತ್ಯ, ಗುಣ ಅಲಂಕಾರ ರೀತಿ ಇತ್ಯಾದಿಗಳೆಲ್ಲದರ ಔಚಿತ್ಯ, ರಸಪ್ರತೀತಿಗೆ ಸಹಾಯಕ, ಆದುದರಿಂದ ಔಚಿತ್ಯವೊಂದೇ ಕಾವ್ಯದ ಗುರಿ ಎನ್ನುವಂತಿಲ್ಲ. ರಸಪ್ರತೀತಿಗೆ ಇದು ಸಹಾಯಕ,: ಧ್ವನಿಯ ಮೂಲಕ ಅದು ಸಾಧ್ಯವಾಗುತ್ತದೆ. ಔಚಿತ್ಯ ಎನ್ನುವುದರಲ್ಲಿ ಯೇ 'ರಸಧ್ವನಿ' ಎಂಬ ಮಾತು ಅಡಗಿದೆ ಎನ್ನುತ್ತಾನೆ.

೫೨.ಅಭಿನವಗುಪ್ತನ ವ್ಯಾಖ್ಯಾನದಂತೆ'ಔಚಿತ್ಯವತ್ ರಸಧ್ವನಿ' ಎಂದರೆ
ಔಚಿತ್ಯದಿಂದ ಧ್ವನಿ, ಧ್ವನಿಯಿಂದ ರಸ ಇದನ್ನು 'ಔಚಿತ್ಯವತ್ ರಸಧ್ವನಿ' ಎಂಬ ಮಾತು ಅರ್ಥವತ್ತಾಗಿ ಸೂಚಿಸುತ್ತದೆ. ಹೀಗೆ ಔಚಿತ್ಯ ಧ್ವನಿ ರಸಗಳು ಒಂದರಿಂದ ಒಂದು ಬೆಳೆದು ಪೂರ್ಣಗೊಳ್ಳುವ ಕಾವ್ಯಚೈತನ್ಯದ ಮೂರು ಮುಖಗಳಾಗುತ್ತವೆ.

೫೩.ಆನಂದವರ್ಧನ ಧ್ವನ್ಯಾಲೋಕ'ದ ಪ್ರಕಾರ ಔಚಿತ್ಯ'ವೆಂದರೆ-ವಸ್ತು, ಅಲಂಕಾರ, ಗುಣ ಇವು ರಸಕ್ಕೆ ಹೊರಗಿನ ಆವರಣಗಳು; ಇವುಗಳಲ್ಲಿ ಔಚಿತ್ಯ'ವಿದ್ದಾಗ ಮಾತ್ರ ರಸನಿಷ್ಪನ್ನವಾಗುತ್ತದೆ ಎಂದು ಹೇಳಿ ವಸ್ತು ಮತ್ತು ಅಲಂಕಾರಗಳಲ್ಲಿ ಔಚಿತ್ಯದ ಅನಿವಾರ್ಯತೆಯನ್ನು ಸ್ಥಾಪಿಸಿದವನು ಆನಂದವರ್ಧನ.

-ಕ್ಷೇಮೇಂದ್ರನ ಅಲಂಕಾರೌಚಿತ್ಯಕ್ಕೆ ಇದೇ ತಳಹದಿ, ಅಲಂಕಾರೌಚಿತ್ಯದ ತಳಹದಿ.

೫೪.ಆನಂದವರ್ಧನ ಧ್ವನ್ಯಾಲೋಕ'ದ ಪ್ರಕಾರ
ಗುಣೌಚಿತ್ಯ:- ಮಾಧುರ್ಯವೋ ಕಾಂತಿಯೋ ಓಜಸ್ಸೋ ರಸಕ್ಕೆ ಅನುಗುಣವಾಗಿ ಬರಬೇಕು.
- ಶೃಂಗಾರರಸಕ್ಕೆ ಸಹಜಗುಣ ಮಾಧುರ್ಯ

ಹಾಗೆಯೇ ವೀರಕ್ಕೆ ಓಜಸ್ಸು, ಇತ್ಯಾದಿ ರಸಕ್ಕೆ ಅನುಗುಣವಾಗಿ ಗುಣಗಳೂ ಮತ್ತು ಅದಕ್ಕೆ ಸಂವಾದಿಯಾಗಿ ಸಂಘಟನೆ(ರೀತಿ)ಯೂ ರೂಪುಗೊಳ್ಳುತ್ತವೆ.

೫೫.ಆನಂದವರ್ಧನ ಧ್ವನ್ಯಾಲೋಕ'ದ ಪ್ರಕಾರ'ಸಂಘಟನೌಚಿತ್ಯ':- ಸಂಘಟನೆಯಲ್ಲಿ ಬರುವ ಪದಪ್ರಯೋಗದಲ್ಲಿಯೂ ಔಚಿತ್ಯವಿರಬೇಕು. ಸಂಘಟನೆಯಲ್ಲಿ ಬರುವ ಈ ಔಚಿತ್ಯವನ್ನು 'ಸಂಘಟನೌಚಿತ್ಯ' ಎಂದು ಕರೆದಿದ್ದಾನೆ.

೫೬.ಆನಂದವರ್ಧನ ಧ್ವನ್ಯಾಲೋಕ'ದ ಪ್ರಕಾರ'ವರ್ಣೌಚಿತ್ಯ:-
ರಸಕ್ಕನುಗುಣವಾಗಿ ಪರಿಪೂರ್ಣ, ಸರಳ ವರ್ಣಾದಿಗಳು ಬರುತ್ತವೆ. ಈ ವರ್ಣೌಚಿತ್ಯದಿಂದಲೇ 'ವರ್ಣಧ್ವನಿ' ಸಾಧ್ಯವಾಗುತ್ತದೆ.

೫೭.ಆನಂದವರ್ಧನ ಧ್ವನ್ಯಾಲೋಕ'ದ ಪ್ರಕಾರ ಪ್ರಕರಣೌಚಿತ್ಯ:-ಕಾವ್ಯದ ವಿವಿಧ ಭಾಗಗಳ ಬೆಳವಣಿಗೆಯಲ್ಲಿಯೂ ಔಚಿತ್ಯವಿರಬೇಕು. ಇದು ಪ್ರಕರಣೌಚಿತ್ಯ. ಸನ್ನಿವೇಶ, ಘಟನೆ, ಪಾತ್ರ, ವರ್ಣನೆ ಈ ಎಲ್ಲ ವಿಭಾಗಗಳಲ್ಲಿ ಔಚಿತ್ಯವಿರಬೇಕು.ಇವುಗಳಿಂದ ಪ್ರಬಂಧ ಧ್ವನಿ(ಭಾವಿಕಾಲಂಕಾರ) ಸಿದ್ಧಿಸುತ್ತದೆ.

೫೮.ಆನಂದ ವರ್ಧನನ ಪ್ರಕಾರ ವಿಭಿನ್ನ ಔಚಿತ್ಯಗಳು
ಕಾವ್ಯದಲ್ಲಿ ಮುಖ್ಯರಸದ ಬೆಳವಣಿಗೆಯನ್ನು ಕವಿ ಗಮನದಲ್ಲಿಟ್ಟುಕೊಂಡು ಅದಕ್ಕನುಗುಣವಾಗಿ ಘಟನೆ ಗಳನ್ನೂ ವರ್ಣನೆಗಳನ್ನೂ ತರಬೇಕಾಗುತ್ತದೆ "ವಿಷಯೌಚಿತ್ಯ' 'ರಸೌಚಿತ್ಯ'ಗಳನ್ನು ಈ ದೃಷ್ಟಿಯಿಂದ ಆನಂದವರ್ಧನ ಎತ್ತಿಹೇಳುತ್ತಾನೆ. ಹೀಗೆ ವರ್ಣ ಪದಪ್ರಯೋಗಗಳಿಂದ ಹಿಡಿದು ವಸ್ತು ರೀತಿ ಅಲಂಕಾರ ರಸಾದಿಗಳವರೆಗೆ ಎಲ್ಲವುಗಳಲ್ಲಿ ಔಚಿತ್ಯವನ್ನು ಸಾಧಿಸುವುದೇ ಶ್ರೇಷ್ಠಕಾವ್ಯರಚನೆಯ ರಹಸ್ಯ ಎಂಬುದನ್ನು ವಿವರಿಸುತ್ತಾನೆ.

೫೯.ಆನಂದ ವರ್ಧನನ ಪ್ರಕಾರ ಔಚಿತ್ಯ ಅನೌಚಿತ್ಯಗಳು
ಅನೌಚಿತ್ಯಾಧೃತೆ ನಾನ್ಯತ್ ರಸಭಂಗಸ್ಯ ಕಾರಣಮ್ |
ಪ್ರಸಿದ್ಧೌಚಿತ್ಯ ಬಂಧಸ್ತು ರಸಸ್ಯೋಪನಿಷತ್ಪರಾ |"

ಅನೌಚಿತ್ಯವೇ ರಸಭಂಗಕ್ಕೆ ಕಾರಣ: ಬೇರೇನೂ ಅಲ್ಲ. ಪ್ರಸಿದ್ಧವಾದ 'ಔಚಿತ್ಯ'ದ ಬಂಧವೇ ರಸದ ರಹಸ್ಯ ಎನ್ನುವ ಈ ಹೇಳಿಕೆ ಔಚಿತ್ಯದ ಮಹತ್ವವನ್ನೂ ಸರ್ವವ್ಯಾಪಕತೆಯನ್ನೂ ಸ್ಪಷ್ಟಪಡಿಸುತ್ತದೆ,

೬೦.ಆನಂದವರ್ಧನನ ಪ್ರಕಾರ:- ರಸದ ರಹಸ್ಯ (ಪರಾ ಉಪನಿಷತ್) ಎನ್ನುವುದು.
-ಕಾವ್ಯಾಭಿವ್ಯಕ್ತಿಯ ಎಲ್ಲ ಹಂತಗಳಲ್ಲಿಯೂ ಅದರ ಎಲ್ಲ ಅಂಗಗಳಲ್ಲಿಯೂ ಓತಪ್ರೋತವಾಗಿ ವ್ಯಾಪಿಸಿರುವ ತತ್ವವೆಂದರೆ * ಔಚಿತ್ಯವೇ.
-ಕವಿಯ ಆಂತರಿಕ ಅನುಭವದಿಂದ ಹಿಡಿದು ಕೃತಿರೂಪಧಾರಣೆಯವರೆಗೂ 'ವಾಚ್ಯ ವಾಚಕ'ಗಳೆರಡನ್ನೂ ನಿಯಂತ್ರಿಸುವ ಏಕೈಕ ಶಕ್ತಿ ಔಚಿತ್ಯವೇ.

"ವಾಚ್ಯಾನಾಂ ವಾಚಕಾನಾಂ ಚ ಯದೌಚಿನ ಯೋಜನಮ್ |
ರಸಾದಿ ವಿಷಯೇತತ್ ಕರ್ಮ ಮುಖ್ಯಂ ಮಹಾಕವೇಃ I (2-23)

ಎಂಬ ಮಾತಿನಲ್ಲಿ ಔಚಿತ್ಯವೇ ಮಹಾಕವಿ ಕರ್ಮರಹಸ್ಯವೆಂದು ಹೇಳಿದ್ದಾನೆ. ಹಿಂದೆ ಹೇಳಿದ 'ರಸಸ್ಯೋಪನಿಷತ್‌ಪರಾ' ಎಂಬುದರಿಂದ ಹಿಡಿದು ಈ ಮಾತಿನವರೆಗೂ ಆನಂದವರ್ಧನನ ಔಚಿತ್ಯದ ವಿವೇಚನೆ ಬೆಳೆದು ಪೂರ್ಣಗೊಂಡಿದೆ.

**Reference**

1. ಭಾರತೀಯ ಕಾವ್ಯಮೀಮಾಂಸೆ -ಡಾ.ತೀ.ನಂ.ಶ್ರೀ
2. ಕನ್ನಡ ಕೈಪಿಡಿ ಭಾಗ೨-ಡಾ.ಕುವೆಂಪು
3. ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ-ಡಾ.ಮಲ್ಲೇಪುರಂ.ಜಿ.ವೆಂಕಟೇಶ
4. ವಿಮರ್ಶೆಯ ಪರಿಭಾಷೆ-ಡಾ.ಓ.ಎಲ್.ನಾಗಭೂಷಣಸ್ವಾಮಿ
5. ಕಾವ್ಯಾರ್ಥ ಪದಕೋಶ:ಡಾ.ಜಿ.ಎಸ್.ಶಿವರುದ್ರಪ್ಪ ಹಾಗೂ ಡಾ.ಕೆ.ವಿ.ನಾರಾಯಣ
6. ತೌಲನಿಕ ಕಾವ್ಯ ಮೀಮಾಂಸೆ-ಡಾ.ಎಚ್.ತಿಪ್ಪೇರುದ್ರಸ್ವಾಮಿ.
7. ಸಾಹಿತ್ಯ ವಿಮರ್ಶೆ-ಡಾ.ಸಿ.ಎನ್.ರಾಮಚಂದ್ರನ್.